ಕರ್ನಾಟಕ ಸ್ಕೌಟ್ ಮತ್ತು ಗೈಡ್
ತಿಂಗಳ ವಾರ್ತಾಪತ್ರಿಕೆ

Karnataka Scout & Guide
Monthly News Magazine

Vol -20 | Issue -12 | December 2023 | ₹ 10/-

# 2024 ನೂತನ ವರ್ಷ ಹಾಗೂ ಸಂಕ್ರಾಂತಿ ಹಬ್ಬದ ಶುಭಾಶಯಗಳು




02 ಡಿಸೆಂಬರ್ 2023 ರಂದು ರಾಜ್ಯ ಕೇಂದ್ರ ಕಾರ್ಯಾಲಯದಲ್ಲಿ ನಡೆದ 105ನೇ ರಾಜ್ಯ ಪರಿಷತ್ ಸಭೆಯಲ್ಲಿ ಭಾಗವಹಿಸಿದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಸಚಿವರಾದ ಮಾನ್ಯಶ್ರೀ ಮಧುಬಂಗಾರಪ್ಪರವರನ್ನು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ಸನ್ಮಾನಿಸಿ ಗೌರವಿಸಿದರು.
ಶ್ರೀ ಕೊಂಡಜ್ಜಿ ಬಿ. ಷಣ್ಮುಖಪ್ಪ, ಶ್ರೀ ಎಂ.ಎ. ಖಾಲಿದ್, ಶ್ರೀ ಟಿ.ಎಸ್. ಲೂಕಾಸ್
ಶ್ರೀ ಎ.ಎನ್. ಮಹೇಶ್ ಇತರರು ಚಿತ್ರದಲ್ಲಿದ್ದಾರೆ.



2023 ನವೆಂಬರ್ 30 ರಿಂದ ಡಿಸೆಂಬರ್ 6 ರವರೆಗೆ ಮೈಸೂರು ಜಿಲ್ಲೆಯ ಶ್ರೀ ಕ್ಷೇತ್ರ ಸುತ್ತೂರಿನಲ್ಲಿ ಜೆ.ಎಸ್.ಎಸ್. ವಿದ್ಯಾಸಂಸ್ಥೆಯ ಶಿಕ್ಷಕ–ಶಿಕ್ಷಕಿಯರಿಗೆ ಏರ್ಪಡಿಸಿದ ಮೂಲ ತರಬೇತಿ ಶಿಬಿರದ ಮುಕ್ತಾಯ ಸಮಾರಂಭದಲ್ಲಿ ಪೂಜ್ಯ ಜಗದ್ಗುರುಗಳಾದ ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿಯವರು ಭಾಗವಹಿಸಿ ಆಶೀರ್ವದಿಸಿದರು. ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ, ಜಂಟಿ ರಾಜ್ಯ ಕಾರ್ಯದರ್ಶಿ ಶ್ರೀ ಬಿ.ಕೆ. ಬಸವರಾಜ, ರಾಜ್ಯ ತರಬೇತಿ ಆಯುಕ್ತೆ ಶ್ರೀಮತಿ ಕೆ.ವಿ. ಶಾಮಲ ಜಿಲ್ಲಾ ಪದಾಧಿಕಾರಿಗಳಾದ ಶ್ರೀ ಪಿ. ವಿಶ್ವನಾಥ, ಶ್ರೀಮತಿ ಪುಷ್ಪವಲ್ಲಿ, ಶ್ರೀ ಟಿ.ಎಸ್. ರವಿಶಂಕರ್, ಶ್ರೀ ಅಬ್ದುಲ್ ಜಮೀಲ್ ಡಾ. ಕೆ.ಬಿ. ಗುರುಮೂರ್ತಿ, ತರಬೇತಿ ನಾಯಕ–ನಾಯಕಿಯರುಗಳು ಹಾಗೂ ಶಿಬಿರಾರ್ಥಿಗಳು ಚಿತ್ರದಲ್ಲಿದ್ದಾರೆ.




2023 ಡಿಸೆಂಬರ್ 21 ರಿಂದ 24 ರವರೆಗೆ ಬೆಳಗಾವಿಯ ಜೈನ್ ಹೆರಿಟೇಜ್ ಶಾಲೆಯಲ್ಲಿ ಆಯೋಜಿಸಿದ್ದ ರಾಷ್ಟ್ರಮಟ್ಟದ ರೋವರ್ಸ್ ಮತ್ತು ರೇಂಜರ್ಸ್ ಕಾರ್ನಿವಲ್ ಶಿಬಿರದ ಸಮಾರೋಪ ಸಮಾರಂಭದಲ್ಲಿ ಕರ್ನಾಟಕ ಸರ್ಕಾರದ ಸಣ್ಣನೀರಾವರಿ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಮಾನ್ಯ ಶ್ರೀ ಎನ್.ಎಸ್. ಬೋಸರಾಜ್‌ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಸ್ಕೌಟ್–ಗೈಡ್ ಚಳುವಳಿಯ ಅಭಿವೃದ್ಧಿಗೆ ಸರ್ಕಾರದ ಸಹಕಾರ ನೀಡುವುದಾಗಿ ತಿಳಿಸಿದರು. ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು, ಶ್ರೀಮತಿ ಸುರೇಖಾ ಶ್ರೀವಾಸ್ತವ, ಉಪನಿರ್ದೇಶಕರು (ಗರ್ಲ್ ಪ್ರೋಗ್ರಾಮ್) ರಾಷ್ಟ್ರ ಸಂಸ್ಥೆ, ನವದೆಹಲಿ, ಶ್ರೀಮತಿ ರೋಹಿಣಿ, ಪ್ರಾಂಶುಪಾಲರು, ಜೈನ್ ಹೆರಿಟೇಜ್ ಶಾಲೆ, ಬೆಳಗಾವಿ, ಶ್ರೀಮತಿ ಪಲ್ಲವಿ ನಾಡಕರ್ಣಿ, ಲೇಡಿ ಕಬ್ ಮಾಸ್ಟರ್, ಶ್ರೀಮತಿ ಅಮ್ಮಿ ದೋಷಿ, ಶ್ರೀ ಜಯಕುಮಾರ್ ಹೆಬಳಿ, ಶ್ರೀ ಎಂ. ಪ್ರಭಾಕರ್ ಭಟ್, ಎಸ್.ಒ.ಸಿ(ಸ್ಕೌ) ಮತ್ತು ಶ್ರೀಮತಿ ಮಂಜುಳ.ಸಿ, ಎಸ್.ಒ.ಸಿ(ಗೈ) ಮತ್ತು ಇತರರು ಚಿತ್ರದಲ್ಲಿದ್ದಾರೆ.

**ಪೋಷಕರು**

ಪಿ.ಜಿ.ಆರ್. ಸಿಂಧ್ಯ

**ಗೌರವ ಅಧ್ಯಕ್ಷರು**

ಡಾ. ಗೊ.ರು. ಚನ್ನಬಸಪ್ಪ

**ಅಧ್ಯಕ್ಷರು**

ಕೊಂಡಜ್ಜಿ ಬಿ. ಷಣ್ಮುಖಪ್ಪ

**ಸಂಪಾದಕರು**

ಕೆ. ಗಂಗಪ್ಪಗೌಡ

**ಸಹಸಂಪಾದಕರು**

ಎನ್. ಶ್ರೀನಿವಾಸನ್

**ಸಂಚಾಲಕರು**

ಬಿ.ಎಸ್. ರವೀಂದ್ರ

**ಸದಸ್ಯರು**

ಮೋಹನ್ ಕೊಂಡಜ್ಜಿ

ಸಿ.ಪಿ. ಪರಮೇಶ್ವರ

ಚಳ್ಳಕೆರೆ ಯರ್ರಿಸ್ವಾಮಿ

ಎಂ.ಎನ್. ಷಡಕ್ಷರಿ

ಸಿ.ವಿ. ತಿರುಮಲರಾವ್

ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ

ಡಾ. ವಸುಂಧರ ಭೂಪತಿ

ಡಾ. ಶಕುಂತಲ

ಪ್ರಭಾವತಿ ಪಾಟೀಲ್



ಸಂಚಿಕೆಯ ವಾರ್ಷಿಕ ಚಂದಾ ರೂ. 100/-

ವಿದ್ಯಾಸಂಸ್ಥೆ ಹಾಗೂ ಸಂಘ-ಸಂಸ್ಥೆಗಳಿಗೆ
ವಾರ್ಷಿಕ ಚಂದಾ ರೂ. 100/-

ಚಂದಾಹಣವನ್ನು
ಸಂಪಾದಕರು, ಕರ್ನಾಟಕ ಸ್ಕೌಟ್ ಮತ್ತು ಗೈಡ್ ಮಾಸಪತ್ರಿಕೆ
ರಾಜ್ಯ ಕೇಂದ್ರ ಕಛೇರಿ, ಶಾಂತಿಗೃಹ
#39, ಅರಮನೆ ರಸ್ತೆ, ಬೆಂಗಳೂರು - 560 001
ಇಲ್ಲಿಗೆ ಕಳುಹಿಸಲು ಕೋರಿದೆ.


# ಕರ್ನಾಟಕ ಸ್ಕೌಟ್ ಮತ್ತು ಗೈಡ್

ಮಾಸಿಕ ವಾರ್ತಾಪತ್ರಿಕೆ

# KARNATAKA Scout & Guide

MONTHLY NEWS MAGAZINE


Vol: 20 | Issue : 12 | December 2023


## ಒಳಪುಟಗಳಲ್ಲಿ...


ರಾಜ್ಯ ಮುಖ್ಯ ಆಯುಕ್ತರ ನುಡಿ ...06

105ನೇ ರಾಜ್ಯ ವಾರ್ಷಿಕ ಮಹಾಸಭೆಯ ವರದಿ 05

ಕರ್ನಾಟಕ ರಾಜ್ಯಕ್ಕೆ ರಾಷ್ಟ್ರಮಟ್ಟದ ಪಾರಿತೋಷಕ ಪ್ರಶಸ್ತಿಗಳು 07

ರಾಜ್ಯ ಮಟ್ಟದ ಸ್ಕೌಟಿಂಗ್ ಸ್ಟೆಮ್ ಶಿಬಿರ 08

ಎಸ್.ಎಸ್.ಎಲ್.ಸಿ ಮತ್ತು ದ್ವಿತೀಯ ಪಿ.ಯು.ಸಿ. ಪ್ರತಿಭಾನ್ವಿತರಿಗೆ ಅಭಿನಂದನಾ ಸಮಾರಂಭ 09

ರೋವರ್ಸ್-ರೇಂಜರ್ಸ್‌ಗಳಿಗೆ ನಾಯಕತ್ವ ತರಬೇತಿ ಮತ್ತು ದಕ್ಷಿಣ ಕನ್ನಡ ಜಿಲ್ಲಾ ಪ್ರಾಂಶುಪಾಲರ ಸಂಘದ ಡೈರಿ ಬಿಡುಗಡೆ ಮತ್ತು ಶೈಕ್ಷಣಿಕ ಸಮಾವೇಶ ಕಾರ್ಯಕ್ರಮ 10

ಏರ್ ಸ್ಕೌಟ್-ಗೈಡ್ ನಾಯಕರ ಮೂಲ ತರಬೇತಿ ಶಿಬಿರ 11

ರಾಷ್ಟ್ರಮಟ್ಟದ ರೋವರ್-ರೇಂಜರ್ ಕಾರ್ನಿವಲ್ 12

ಜನವರಿ 2024ರ ಕಾರ್ಯಕ್ರಮಗಳು 14

ಜಿಲ್ಲಾ ವಾರ್ತೆಗಳು 15


## ಓದುಗರ ಗಮನಕ್ಕೆ

ಸಹೃದಯ ಓದುಗರೇ,

ಈ ಮಾಸಪತ್ರಿಕೆಯ ಬಗ್ಗೆ ತಮ್ಮ ಅನಿಸಿಕೆ ಅಭಿಪ್ರಾಯ ಮತ್ತು ಸಲಹೆಗಳನ್ನು ಕಳುಹಿಸಲು ಕೋರಿಕೆ. ಇದರಿಂದ ಮಾಸಪತ್ರಿಕೆಯನ್ನು ಮತ್ತಷ್ಟು ಉತ್ತಮಗೊಳಿಸಲು ಸಹಕಾರಿಯಾಗುತ್ತದೆ. ಅಲ್ಲದೆ ತಾವು, ಸ್ಕೌಟ್-ಗೈಡ್ ಚಳವಳಿಯ ಬಗ್ಗೆ ರಚಿಸಿರುವ ಕವನಗಳು, ಸಣ್ಣ ಕತೆಗಳು, ಪ್ರಬಂಧಗಳು, ಪ್ರವಾಸ ಕಥನಗಳು, ಶಿಬಿರದ ಅನುಭವಗಳು ಇತ್ಯಾದಿಗಳನ್ನು ಕಳುಹಿಸಿಕೊಡಲು ಕೋರಿದೆ. ಇವುಗಳಲ್ಲಿ ಸೂಕ್ತ ಕಂಡವುಗಳನ್ನು ಮಾಸಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

- ಸಂಪಾದಕರು


080-2226 0017, 2226 7470 | www.bsgkarnataka.org | The Bharat Scouts & Guides-Karnataka



# ರಾಜ್ಯ ಮುಖ್ಯ ಆಯುಕ್ತರ ನುಡಿ

**ಸಮಸ್ತ ಸ್ಕೌಟ್–ಗೈಡ್ ಬಂಧುಗಳಿಗೆ**

ನಾವೆಲ್ಲರೂ ಈಗ ಹೊಸ ವರ್ಷ 2024ರ ಅಂಚಿನಲ್ಲಿದ್ದೇವೆ. 2023ರಲ್ಲಿ ಹಲವಾರು ಕಾರ್ಯಕ್ರಮಗಳು, ಚಟುವಟಿಕೆಗಳು ಮತ್ತು ತರಬೇತಿ ಶಿಬಿರಗಳನ್ನು ನಾವು ಯಶಸ್ವಿಯಾಗಿ ನಡೆಸಿದ್ದು, ಸ್ಕೌಟ್ಸ್ ಮತ್ತು ಗೈಡ್ಸ್ ಚಳುವಳಿಗೆ ಉತ್ತಮವಾದ ವರ್ಷವನ್ನಾಗಿಸಿದ್ದೇವೆ. ಈ ವರ್ಷದಲ್ಲಿ ನಮ್ಮ ಸಂಸ್ಥೆ ಹತ್ತಾರು ಸಾಧನೆಗಳನ್ನು ಮಾಡಿದೆ. ರಾಜ್ಯ ಸರ್ಕಾರ, ಮುಖ್ಯ ಮಂತ್ರಿಗಳು, ಸಚಿವರುಗಳು, ವಿವಿಧ ಇಲಾಖೆಗಳ ಅಧಿಕಾರಿಗಳು, ನಮ್ಮ ಚಳುವಳಿಗೆ ಅಭೂತಪೂರ್ವ ಸಹಕಾರ ನೀಡಿದ್ದಾರೆ. ರಾಜ್ಯಾದ್ಯಂತ ಮಠಮಾನ್ಯಗಳು, ಖಾಸಗಿ ಶಿಕ್ಷಣ ಸಂಸ್ಥೆಗಳು ನಮ್ಮ ಸಂಸ್ಥೆಯೊಂದಿಗೆ ಕೈಜೋಡಿಸಿವೆ. ಜಿಲ್ಲಾಡಳಿತಗಳು ಮತ್ತು ಶಿಕ್ಷಣ ಇಲಾಖೆಯಿಂದ ನಮಗೆ ಎಲ್ಲ ರೀತಿಯ ಪ್ರೋತ್ಸಾಹ ಸಿಕ್ಕಿದೆ. ಶಿಕ್ಷಣ ಇಲಾಖೆಯಿಂದ ನಮ್ಮ ಚಳುವಳಿಯ ಬೆಳವಣಿಗೆ ಮತ್ತು ವಿಸ್ತರಣೆಗೆ ಪೂರಕವಾದ ಹಲವಾರು ಆದೇಶಗಳು ಮತ್ತು ಸುತ್ತೋಲೆ ಸಕಾಲದಲ್ಲಿ ಆಗಿವೆ. ಹಾಸನಾಂಬ ದೇವಿ ಮತ್ತು ಶ್ರೀ ಸಿದ್ದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ ಹಾಗೂ ಇನ್ನಿತರ ಸಾರ್ವಜನಿಕ ಉತ್ಸವಗಳಲ್ಲಿ ರೇಂಜರ್ ರೋವರ್‌ಗಳು ಸೇವೆ ಸಲ್ಲಿಸುವ ಅವಕಾಶವನ್ನು ಸರ್ಕಾರ ಮತ್ತು ಜಿಲ್ಲಾಡಳಿತಗಳು ನಮ್ಮ ಮೇಲೆ ವಿಶ್ವಾಸವನ್ನಿಟ್ಟು ಮಾಡಿಕೊಟ್ಟಿವೆ. ಸಹಕಾರ ಕೊಟ್ಟಿರುವ ಪ್ರತಿಯೊಬ್ಬರಿಗೂ ನಮ್ಮ ಸಂಸ್ಥೆ ಅಭಾರಿಯಾಗಿರುತ್ತದೆ. 2024ರಲ್ಲಿ ಹಲವಾರು ಕಾರ್ಯಕ್ರಮಗಳು ಮತ್ತು ಮಿನಿ ಜಾಂಬೋರಿಗಳನ್ನು ಆಯೋಜಿಸುವ ಸಿದ್ದತೆಯಲ್ಲಿರುವ ನಮಗೆ ಮತ್ತಷ್ಟು ಉತ್ಸುಕತೆಯಿಂದ ಕೆಲಸ ಮಾಡಲು ಇವೆಲ್ಲವೂ ಪ್ರೇರಣೆಯಾಗಲಿವೆ.

ಡಿಸೆಂಬರ್ 02 ರಂದು ನಡೆದ ರಾಜ್ಯ ಪರಿಷತ್ ಸಭೆ ಅತ್ಯಂತ ಯಶಸ್ವಿಯಾಗಿ ನಡೆದು, ಹಲವಾರು ವಿಷಯಗಳ ಬಗ್ಗೆ ಫಲಪ್ರದವಾದ ಚರ್ಚೆಯಾಗಿರುವುದು ಸಂತೋಷ ತಂದಿದೆ. ಕರ್ನಾಟಕ ಸರ್ಕಾರದ ಮಾನ್ಯ ಶಿಕ್ಷಣ ಸಚಿವರಾದ ಶ್ರೀ ಮಧು ಬಂಗಾರಪ್ಪ ಅವರು ಸಭೆಯಲ್ಲಿ ಭಾಗವಹಿಸಿದ್ದು ಔಚಿತ್ಯ ಪೂರ್ಣವಾಗಿತ್ತು. ಚಳುವಳಿಯ ಬೆಳವಣಿಗೆಗೆ ಪೂರಕವಾಗಿ ಸಂಸ್ಥೆಗೆ ಅಗತ್ಯವಿರುವ ಸಮಸ್ಯೆಗಳನ್ನು ಆಲಿಸಿ, ಸಕಾರಾತ್ಮಕವಾಗಿ ಸ್ಪಂದಿಸಿರುವ ಅವರಿಗೆ ಅಭಿನಂದನೆಗಳು.

ಸಭೆಯ ಒಮ್ಮತದ ತೀರ್ಮಾನದಂತೆ, ರಾಜ್ಯ ಮತ್ತು ಜಿಲ್ಲಾ ಸಂಸ್ಥೆಗಳಲ್ಲಿ ವಯಸ್ಕ ನಾಯಕರ ಜವಾಬ್ದಾರಿಗಳನ್ನು ಸ್ಥಾನಪಲ್ಲಟಗೊಳಿಸಲಾಗಿದೆ. ಚಳುವಳಿಯಲ್ಲಿ ಆಸಕ್ತಿ ಮತ್ತು ಬದ್ದತೆಯಿಂದ ತೊಡಗಿಸಿಕೊಂಡಿರುವ ಕೆಲವು ಮುಖಂಡರುಗಳಿಗೆ ವಿವಿಧ ಹುದ್ದೆಗಳ ಜವಾಬ್ದಾರಿಗಳನ್ನು ನೀಡಲಾಗಿದೆ.

ಚಳುವಳಿಯ ಪರಿಣಾಮಕಾರಿ ಬೆಳವಣಿಗೆ ದೃಷ್ಟಿಯಿಂದ ಸಂಸ್ಥೆಯಲ್ಲಿ ಏರ್ ಸ್ಕೌಟ್ಸ್, ಸೀ ಸ್ಕೌಟ್, ಸಮುದಾಯ ಅಭಿವೃದ್ದಿ ಸಮಿತಿ, ಸಾಂಸ್ಕೃತಿಕ ಸಮಿತಿ, ಯುವ ಸಮಿತಿ ಹಾಗೂ ವಿಶೇಷ ಮಕ್ಕಳ ಸಮಿತಿಗಳನ್ನು ರಚಿಸಿದ್ದು, ಅರ್ಹ ಮತ್ತು ಪ್ರತಿಭಾನ್ವಿತ ಮುಖಂಡರುಗಳನ್ನು ಸಂಯೋಜಕರನ್ನಾಗಿ ನೇಮಕ ಮಾಡಲಾಗಿದೆ. ಈ ಎಲ್ಲ ಪ್ರಕ್ರಿಯೆಗಳಲ್ಲಿ ಚಳುವಳಿಯ ಮುಖಂಡರು ಮತ್ತು ಪದಾಧಿಕಾರಿಗಳಿಂದ ಸಿಕ್ಕಿರುವ ಸಹಕಾರಕ್ಕೆ ನಾನು ಚಿರಋಣಿ. ಎಲ್ಲರ ಸಂಘಟಿತ ಪ್ರಯತ್ನದಿಂದ ದೇಶದಲ್ಲಿ ಕರ್ನಾಟಕವು ಚಳುವಳಿಯ ಬೆಳವಣಿಯಲ್ಲಿ ಉನ್ನತ ಸ್ಥಾನದಲ್ಲಿರುವುದು ಹೆಮ್ಮೆಯ ಸಂಗತಿ. ಮುಂದೆಯೂ ಇಂತಹ ಯಶಸ್ಸಿನ ನಿರೀಕ್ಷೆಯಲ್ಲಿದ್ದೇನೆ. ಚಳುವಳಿಯನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಬಲಪಡಿಸುವ ನಮ್ಮ ಉದ್ದೇಶ ಈ ವರ್ಷದಲ್ಲಿ ಅನುಷ್ಠಾನಗೊಳ್ಳುವ ವಿಶ್ವಾಸ ಇದೆ.

ಡಿಸೆಂಬರ್ ತಿಂಗಳಲ್ಲಿ ರಾಜ್ಯಾದ್ಯಂತ ಎಲ್ಲ ಜಿಲ್ಲೆ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ಹತ್ತು ಹಲವು ಕಾರ್ಯಕ್ರಮಗಳಾಗಿವೆ. ಮೈಸೂರು, ವಿಜಯನಗರ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಜಿಲ್ಲಾ ಮಟ್ಟದ ಮೂಲತರಬೇತಿ ಶಿಬಿರಗಳು ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಂಸ್ಥೆಯಿಂದ ದ್ವಿತೀಯ ಸೋಪಾನ ಪರೀಕ್ಷಾ ಶಿಬಿರ ಯಶಸ್ವಿಯಾಗಿ ನಡೆದಿವೆ. ಮೂಡಬಿದಿರೆಯಲ್ಲಿ ನಮ್ಮ ಸಂಸ್ಥೆಯ ಮಹತ್ವಾಕಾಂಕ್ಷಿ ಕಾರ್ಯಕ್ರಮಗಳಲ್ಲಿ ಒಂದಾಗಿರುವ" 2022–23ನೇ ಸಾಲಿನ ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪಿಯುಸಿ ಪ್ರತಿಭಾನ್ವಿತ ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್‌ಗಳಿಗೆ ರಾಜ್ಯ ಮಟ್ಟದ ಅಭಿನಂದನಾ ಸಮಾರಂಭ" ಹಾಗೂ "ರಾಜ್ಯ ಮಟ್ಟದ ರೋವರ್ಸ್–ರೇಂಜರ್ಸ್‌ಗಳಿಗೆ ಸ್ಕೌಟಿಂಗ್ ಸ್ಟೇಮ್ ಮತ್ತು ಔಷದಿ ಸಸ್ಯಗಳ ಮಾಹಿತಿ ಶಿಬಿರ" ಹಾಗೂ ವಿಟ್ಲದಲ್ಲಿ ನಡೆದ ದಕ್ಷಿಣ ಕನ್ನಡ ಜಿಲ್ಲಾ ಕ್ಯಾಂಪೋರಿಗಳು ಅತ್ಯಂತ ಯಶಸ್ವಿಯಾಗಿ ನಡೆದಿವೆ.

1922ರಲ್ಲಿ ಪ್ರಕಟಣೆ ಆರಂಭಿಸಿದ ಸಂಸ್ಥೆಯ ಮುಖವಾಣಿ 'ಕರ್ನಾಟಕ ಸ್ಕೌಟ್ ಮತ್ತು ಗೈಡ್ ವಾರ್ತಾ ಪತ್ರಿಕೆ'ಯ ಕನ್ನಡ ಅವತರಿಣಿಕೆಗೆ ನೂರು ವರುಷ ತುಂಬಿದ ಸಂಭ್ರಮ. ಇದು ಸಂಸ್ಥೆಯ ಇತಿಹಾಸದಲ್ಲಿ ಒಂದು ಮೈಲಿಗಲ್ಲು. ಇದರ ಲಾಂಛನ ಮುಖ ಪುಟವನ್ನು ಅಲಂಕರಿಸಿದೆ ಈ ಕಾರ್ಯಕ್ರಮವನ್ನು ಅರ್ಥ ಪೂರ್ಣವಾಗಿ ಆಚರಿಸಲು ಸಂಸ್ಥೆಯು ಕಾರ್ಯಯೋಜನೆ ರೂಪಿಸುತ್ತಿದೆ.

ಮಂಗಳೂರಿನ ಸೆಂಟ್ ಆಗ್ನೇಸ್ ಸ್ಪೆಷಲ್ ಸ್ಕೂಲ್‌ನ ವಾರ್ಷಿಕೋತ್ಸವ ಸಮಾರಂಭ, ಮಂಗಳೂರಿನಲ್ಲಿ ನಡೆದ ಪದವಿ ಪೂರ್ವ ವಿಭಾಗದ ರೋವರ್ಸ್–ರೇಂಜರ್ಸ್‌ಗಳಿಗೆ ನಾಯಕತ್ವ ತರಬೇತಿ / ದಕ್ಷಿಣ ಕನ್ನಡ ಜಿಲ್ಲಾ ಪ್ರಾಂಶುಪಾಲರ ಸಂಘದ ಡೈರಿ ಬಿಡುಗಡೆ / ಶೈಕ್ಷಣಿಕ ಸಮಾವೇಶ, ಹಾಸನ ಸ್ಥಳೀಯ ಸಂಸ್ಥೆ ಹಾಗೂ ಮಂಗಳೂರು ಪಬ್ಲಿಕ್ ಶಾಲೆಯಲ್ಲಿ ಸ್ಕೌಟ್ಸ್–ಗೈಡ್ಸ್ ಘಟಕ ಪ್ರಾರಂಭಗೊಂಡ ಸಮಾರಂಭಗಳಲ್ಲಿ ನಾನು ಭಾಗವಹಿಸಿದ್ದು ಒಂದು ವಿಶೇಷ ಸಂದರ್ಭವಾಗಿತ್ತು. ಬೆಳಗಾವಿಯ ಜೈನ್ ಹೆರಿಟೇಜ್ ಶಾಲೆಯಲ್ಲಿ ನಡೆದ 5 ದಿನಗಳ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ನ್ಯಾಷನಲ್ ರೋವರ್ಸ್ ಮತ್ತು ರೇಂಜರ್ಸ್ ಕಾರ್ನಿವಾಲ್‌ನಲ್ಲಿ ದೇಶದ ವಿವಿಧ ರಾಜ್ಯಗಳಿಂದ ಆಗಮಿಸಿದ್ದ, ಸುಮಾರು 700ಕ್ಕೂ ಹೆಚ್ಚು ರೋವರ್ಸ್ ಮತ್ತು ರೇಂಜರ್‌ಗಳ ಶಕ್ತಿಯುತ ಮತ್ತು ವೈವಿಧ್ಯಮಯ ಸಾಂಸ್ಕೃತಿಕ ಚಟುವಟಿಕೆಗಳಿಂದ ಕೂಡಿತ್ತು.

ಒಟ್ಟಾರೆ, ಡಿಸೆಂಬರ್ ತಿಂಗಳಿನಲ್ಲಿ ರಾಜ್ಯದ ವಿವಿಧ ಭಾಗಗಳಲ್ಲಿ ನಡೆದ ನಮ್ಮ ಚಟುವಟಿಕೆ, ಶಿಬಿರ ಮತ್ತು ಕಾರ್ಯಕ್ರಮಗಳಿಗೆ ಅನೇಕ ಮಹನೀಯರುಗಳ ಮತ್ತು ಶಿಕ್ಷಣ ಸಂಸ್ಥೆಗಳು ಮತ್ತು ಅವುಗಳ ಆಡಳಿತ ಮಂಡಳಿಯ ಅಭೂತಪೂರ್ವ ನೆರವು ಸಿಕ್ಕಿದೆ. ವಿಶೇಷವಾಗಿ ಈ ತಿಂಗಳು ಸುತ್ತೂರು ಮಠದ ಪೂಜ್ಯ ಸ್ವಾಮೀಜಿಯವರ ಆಶೀರ್ವಾದ ನಮಗೆ ಸಿಕ್ಕಿದೆ. ಎಂದಿನಂತೆ ಆಳ್ವಾಸ್ ಶಿಕ್ಷಣ ಸಂಸ್ಥೆಯ ಸಂಪೂರ್ಣ ಸಹಕಾರ ಮುಂದುವರೆದಿದೆ. ಶಿಕ್ಷಣ ಇಲಾಖೆಯ ಅಧಿಕಾರಿಗಳು, ಶಿಕ್ಷಕರು, ನಮ್ಮ ಸಂಸ್ಥೆಯ ಪದಾಧಿಕಾರಿಗಳು ಹಾಗೂ ಪೋಷಕರು ಸಹಕಾರ ನೀಡಿದ್ದಾರೆ. ಅವರೆಲ್ಲರಿಗೆ ತುಂಬು ಹೃದಯದ ಧನ್ಯವಾದಗಳು.

'ಹುಟ್ಟುವ ಪ್ರತಿ ಮಗುವು ವಿಶ್ವಮಾನವನೇ' ಎಂದು ವಿಶ್ವಮಾನವ ಸಂದೇಶ ಸಾರಿದ ರಾಷ್ಟ್ರಕವಿ ಕುವೆಂಪು ಅವರ ಜನ್ಮ ದಿನ ಡಿಸೆಂಬರ್ 29. ಕುವೆಂಪು ಅವರು ಮಾನವ ಕುಲಕ್ಕೆ ನೀಡಿದ ಆದರ್ಶಗಳು ಸಾರ್ವಕಾಲಿಕ. ವೈಚಾರಿಕತೆ, ಜಾತ್ಯತೀತತೆ ಹಾಗೂ ಮೌಢ್ಯ ಕಂದಾಚಾರಗಳ ವಿರುದ್ಧದ ಕುವೆಂಪು ಅವರ ಸಾಹಿತ್ಯ ಹಾಗೂ ಸಂದೇಶಗಳು ಪ್ರಸಕ್ತ ಸನ್ನಿವೇಶಕ್ಕೆ ಅನಿವಾರ್ಯತೆಯಾಗಿದ್ದು ಇವುಗಳನ್ನು ಮಕ್ಕಳಿಗೆ ತಿಳಿಸುವ ಕೆಲಸವಾಗಬೇಕಿದೆ.

ಕೆಲಕಾಲದ ವಿರಾಮದ ಬಳಿಕ ಕೊರೊನಾ ವೈರಾಣುವಿನ ಹೊಸ ಉಪತಳಿ ಜೆ.ಎನ್.1 ಬಗ್ಗೆ ಚರ್ಚೆಯಾಗುತ್ತಿದೆ. ದೇಶದ ವಿವಿಧ ಭಾಗಗಳಲ್ಲಿ ಮಾತ್ರವಲ್ಲ ಕರ್ನಾಟಕದಲ್ಲೂ ಕೆಲವು ಪ್ರಕರಣಗಳು ವರದಿಯಾಗಿವೆ. ಹೊಸ ಉಪತಳಿಯ ಪ್ರಭಾವ ಹೆಚ್ಚಾಗಿ ಇರುವುದಿಲ್ಲ ಎಂದು ಪರಿಣಿತರು ಅಂದಾಜಿಸಿದ್ದರೂ, ಸರ್ಕಾರದ ಮಾರ್ಗಸೂಚಿಗಳು ಮತ್ತು ಸಲಹೆಗಳನ್ನು ನಾವೆಲ್ಲರೂ ಪಾಲಿಸೋಣ.

ಸಮಸ್ತ ಸ್ಕೌಟ್ಸ್–ಗೈಡ್ಸ್ ಬಂಧುಗಳಿಗೆ ಕ್ರಿಸ್‌ಮಸ್ ಹಬ್ಬದ ಹಾಗೂ ಹೊಸವರ್ಷ ಹಾಗೂ ಸಂಕ್ರಾಂತಿ ಹಬ್ಬದ ಶುಭಾಶಯಗಳು.

ತಮ್ಮ ವಿಶ್ವಾಸಿ

(ಪಿ.ಜಿ.ಆರ್. ಸಿಂಧ್ಯ)
ರಾಜ್ಯ ಮುಖ್ಯ ಆಯುಕ್ತರು

ವ್ಯರ್ಥ ಮಾಡಬೇಡಿ ಅನ್ನ
ಹಸಿದವರಿಗದೇ ಚಿನ್ನ




# 105ನೇ ರಾಜ್ಯ ವಾರ್ಷಿಕ ಮಹಾಸಭೆಯ ವರದಿ

ಡಿಸೆಂಬರ್ 02 ರಂದು ರಾಜ್ಯದ 105ನೇ ರಾಜ್ಯ ಪರಿಷತ್ ಮಹಾ ಸಭೆಯನ್ನು ಶ್ರೀ ಕೊಂಡಜ್ಜಿ ಬಸಪ್ಪ ಸಭಾಂಗಣ, ರಾಜ್ಯ ಕೇಂದ್ರ ಕಛೇರಿ, ಬೆಂಗಳೂರು ಇಲ್ಲಿ ನೆರವೇರಿಸಲಾಯಿತು. ಶ್ರೀಮತಿ ಗೀತಾ ನಟರಾಜ್, ರಾಜ್ಯ ಆಯುಕ್ತರು (ಗೈಡ್) ರವರು ಸರ್ವರನ್ನು ಸ್ವಾಗತಿಸುವ ಮೂಲಕ ಸಭೆಯು ಪ್ರಾರಂಭವಾಯಿತು.



ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪ, ಉಪಾಧ್ಯಕ್ಷರು ಇವರು ಅಧ್ಯಕ್ಷತೆ ವಹಿಸಿದ್ದರು, ಅಂದು ಬೆಳಗ್ಗೆ 10.50ಕ್ಕೆ ಶ್ರೀ ಮಧು ಬಂಗಾರಪ್ಪ, ಸನ್ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಕರ್ನಾಟಕ ಸರ್ಕಾರ ಇವರು ಗಿಡಕ್ಕೆ ನೀರು ಹಾಕುವುದರ ಮೂಲಕ ಸಭೆಯನ್ನು ಉದ್ಘಾಟಿಸಿದರು ಹಾಗೂ ಕ್ಯಾಪ್ಟನ್ ಎಂ.ವಿ. ಪ್ರಾಂಜಲ್, ರಾಷ್ಟ್ರಪತಿ ಸ್ಕೌಟ್ಸ್ ಇವರಿಗೆ ಪುಷ್ಪ ನಮನವನ್ನು ಅರ್ಪಿಸಿದರು. ನಂತರ ಮಾತನಾಡುತ್ತ 105ನೇ ರಾಜ್ಯ ಪರಿಷತ್ ಸಭೆಯು ಯಶಸ್ವಿಯಾಗಲಿ ಎಂದು ಹಾರೈಸಿದರು. ಸಂಸ್ಥೆಯ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಪಡೆದು ತಿಳಿದುಕೊಳ್ಳುತ್ತೇನೆ ಹಾಗೂ ಸಂಸ್ಥೆಯ ಅಭಿವೃದ್ಧಿಗೆ ಶ್ರಮಿಸುತ್ತೇನೆ. ಶ್ರೀ ಪಿ.ಜಿ.ಆರ್. ಸಿಂಧ್ಯ ಇವರ ಮಾರ್ಗದರ್ಶನದಲ್ಲಿ ಮುಂದುವರೆಯುತ್ತೇನೆಂದು ತಿಳಿಸಿ ರಾಜ್ಯ ಪರಿಷತ್ ಸಭೆಯ ಸದಸ್ಯರುಗಳಿಗೆ ಅಭಿನಂದಿಸಿದರು.

ಶ್ರೀ ಎಂ.ಎ. ಖಾಲಿದ್, ರಾಜ್ಯ ಆಯುಕ್ತರು (ಸ್ಕೌಟ್ಸ್) ಇವರು ಪ್ರಾಸ್ತಾವಿಕ ನುಡಿಯಲ್ಲಿ ಮಾತನಾಡಿ 2022–23ನೇ ಸಾಲಿನಲ್ಲಿ ರಾಜ್ಯ ಸಂಸ್ಥೆಯ ಪ್ರಗತಿಯನ್ನು ಶ್ಲಾಘಿಸಿದರು. ಇದೇ ಸಂದರ್ಭದಲ್ಲಿ ಶ್ರೀಮತಿ ರಾಣಿ ಮಾಚಯ್ಯ, ಪದ್ಮಶ್ರೀ ಪುರಸ್ಕೃತರು, ಜಿಲ್ಲಾ ಗೈಡ್ ಆಯುಕ್ತರು, ಕೊಡಗು, ಶ್ರೀಮತಿ ಸಪನಾ ಅನಿಗೋಳ್, ಗೈಡ್ ಕ್ಯಾಪ್ಟನ್, ರಾಷ್ಟ್ರಪ್ರಶಸ್ತಿ ಪುರಸ್ಕೃತ ಶಿಕ್ಷಕಿ, ಪಿ.ಹೆಚ್.ಡಿ. ಪದವಿ ಪಡೆದವರು, ಶ್ರೀಮತಿ ಅಲೀಮಾ, ಎ.ಎಲ್.ಟಿ(ಗೈಡ್), ರಾಷ್ಟ್ರ ಮಟ್ಟದ ಯೋಗಪಟು, ಇವರುಗಳನ್ನು ಅಭಿನಂದಿಸಿ ಗೌರವಿಸಲಾಯಿತು.

ಶ್ರೀ ಕೊಂಡಜ್ಜಿ ಷಣ್ಮುಖಪ್ಪ, ಸಭೆಯ ಅಧ್ಯಕ್ಷರು ಮಾತನಾಡಿ ಸಂಸ್ಥೆಯ ಘನ ಉದ್ದೇಶ ಮಕ್ಕಳ ಕಾರ್ಯಕ್ರಮಗಳ ಕುರಿತು ಹಿಂದಿನಿಂದ ನಡೆದು ಬಂದ ಪ್ರಗತಿಯ ಬಗ್ಗೆ ತಿಳಿಸಿ, ಪ್ರಸಕ್ತ ಸಾಲಿನ ಅಭಿವೃದ್ಧಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ನಂತರ ಶ್ರೀ ಕೆ. ಗಂಗಪ್ಪಗೌಡ, ರಾಜ್ಯ ಕಾರ್ಯದರ್ಶಿಗಳು 105ನೇ ರಾಜ್ಯ ಪರಿಷತ್ ಸಭೆಯ ಅಜೆಂಡಾ ಪ್ರಕಾರ ಸಭೆಯನ್ನು ಪ್ರಾರಂಭಿಸಿ ನಡೆಸಿದರು. ನಂತರ ಶ್ರೀಮತಿ ಶಾಮಲ ಕೆ.ವಿ., ರಾಜ್ಯ ತರಬೇತಿ ಆಯುಕ್ತರು (ಗೈಡ್) ಇವರು ನಿಧನ ಹೊಂದಿದ ಮಹನೀಯರುಗಳ ವಿವರಗಳನ್ನು ಓದಿ ಅವರುಗಳಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿದರು. ಒಂದು ನಿಮಿಷ ಮೌನ ಪ್ರಾರ್ಥನೆಯೊಂದಿಗೆ ಅವರುಗಳ ಕುಟುಂಬಕ್ಕೆ ಸಾಂತ್ವನ ತಿಳಿಸಲಾಯಿತು.





ನಂತರ ಸಭೆಯ ಚರ್ಚಾಂಶಗಳನ್ನು ಸುದೀರ್ಘವಾಗಿ ಚರ್ಚಿಸಿ ಸಭೆಯ ಗೌರವಾನ್ವಿತ ಸದಸ್ಯರಿಂದ ಅನುಮೋದನೆ ಪಡೆಯಲಾಯಿತು. ಇದೇ ಸಂದರ್ಭದಲ್ಲಿ ರಾಜ್ಯ ಮಟ್ಟದ& ವಿಭಾಗೀಯ ಮಟ್ಟದ ಪಾರಿತೋಷಕ ಮತ್ತು ಪ್ರಶಸ್ತಿ ಪತ್ರಗಳನ್ನು ವಿತರಿಸಲಾಯಿತು.

ರಾಜ್ಯ ಮುಖ್ಯ ಆಯುಕ್ತರಾದ ಮಾನ್ಯ ಶ್ರೀ ಪಿ.ಜಿ.ಆರ್. ಸಿಂಧ್ಯ ಇವರು ಮಾತನಾಡಿ ಜಿಲ್ಲೆಗಳಿಗೆ ನೀಡಿರುವ ಸಮಗ್ರ ಅಭಿವೃದ್ಧಿಯನ್ನು ಪರಿಗಣಿಸಿ ನೀಡಿರುವ ಪ್ರಶಸ್ತಿ ಮತ್ತು ಪಾರಿತೋಷಕ ಪಡೆದಿರುವ ಜಿಲ್ಲೆಗಳಿಗೆ ಅಭಿನಂದಿಸಿದರು. 2022–23ನೇ ಸಾಲಿನಲ್ಲಿ ಸಾಧಿಸಿರುವ ಗಣತಿ, ಕಾರ್ಯಕ್ರಮ, ತರಬೇತಿ, ನಿಯೋಜನೆ, ಬೇಸಿಗೆ ಶಿಬಿರ, ಸಮುದಾಯ ಸೇವೆ ಇತ್ಯಾದಿಗಳ ಪ್ರಗತಿಯಿಂದ ಕರ್ನಾಟಕ ರಾಜ್ಯ ದೇಶಕ್ಕೆ ಪ್ರಥಮ ರಾಜ್ಯವಾಗಿ ಹೊರಹೊಮ್ಮಿಸುವ ಬಗ್ಗೆ ತಿಳಿಸಿದರು.

2022–23ನೇ ಸಾಲಿನ ಜಿಲ್ಲೆಗಳ ಗಣತಿ, ಕಾರ್ಯಕ್ರಮ, ಚಟುವಟಿಕೆಗಳು, ತರಬೇತಿಗಳು, ಸಭೆಗಳು, ರಾಜ್ಯ, ರಾಷ್ಟ್ರ ಮತ್ತುಅಂತರರಾಷ್ಟ್ರೀಯ ಮಟ್ಟದ ನಿಯೋಜನೆಗಳು ಮುಂತಾದ ಅಂಶಗಳ ಸಮಗ್ರಅಭಿವೃದ್ಧಿಯನ್ನು ಪರಿಗಣಿಸಿ, ರಾಜ್ಯ ಮಟ್ಟದ ಮತ್ತು ವಿಭಾಗೀಯ ಮಟ್ಟದ ಪಾರಿತೋಷಕ ಮತ್ತು ಪ್ರಶಸ್ತಿ ಪತ್ರವನ್ನು ಗಳಿಸಿರುವ ಈ ಕೆಳಕಂಡ ಜಿಲ್ಲೆಗಳ ಮುಖ್ಯಆಯುಕ್ತರು, ಜಿಲ್ಲಾ ಹಾಗೂ ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳಿಗೆ ಮತ್ತು ಸ್ಕೌಟರ್ಸ್–ಗೈಡರ್ಸ್‌ಗಳಿಗೆ ಅಭಿನಂದನೆಗಳು.

## ರಾಜ್ಯ ಮಟ್ಟದ ಪಾರಿತೋಷಕ ಪ್ರಶಸ್ತಿಪಡೆದ ಜಿಲ್ಲೆಗಳ ವಿವರಗಳು



ಪ್ರಥಮ ಸ್ಥಾನ - ದಕ್ಷಿಣಕನ್ನಡ
ಅಬ್ದುಲ್ ಗಫಾರ್ ಪರ್ಯಾಯ ಫಲಕ



ದ್ವಿತೀಯ ಸ್ಥಾನ - ಬೆಳಗಾವಿ
ಜಸ್ಟೀಸ್ ಶಂಕರನಾರಾಯಣರಾವ್ ಪರ್ಯಾಯ ಫಲಕ



ತೃತೀಯ ಸ್ಥಾನ - ಉಡುಪಿ
ಮೇಜರ್ ವೈ.ವಿ.ಕೆ. ಮೂರ್ತಿ ಪರ್ಯಾಯ ಫಲಕ

## ವಿಭಾಗ ಮಟ್ಟದ ಪರ್ಯಾಯ ಫಲಕ – ಪ್ರಶಸ್ತಿಗಳು

### ಬೆಂಗಳೂರು ವಿಭಾಗ



ಪ್ರಥಮ ಸ್ಥಾನ - ದಾವಣಗೆರೆ
ವಿ.ಪಿ. ದೀನದಯಾಳು ನಾಯ್ಡು ಪರ್ಯಾಯ ಫಲಕ



ದ್ವಿತೀಯ ಸ್ಥಾನ - ಕೋಲಾರ



ತೃತೀಯ ಸ್ಥಾನ - ಬೆಂಗಳೂರು ದಕ್ಷಿಣ

### ಮೈಸೂರು ವಿಭಾಗ



ಪ್ರಥಮ ಸ್ಥಾನ - ಹಾಸನ
ಜೆ.ಬಿ. ಮಲ್ಲಾರಾಧ್ಯ ಪರ್ಯಾಯ ಫಲಕ



ದ್ವಿತೀಯ ಸ್ಥಾನ - ಮೈಸೂರು



ತೃತೀಯ ಸ್ಥಾನ - ಚಾಮರಾಜನಗರ

## ಬೆಳಗಾವಿ ವಿಭಾಗ



ಪ್ರಥಮ ಸ್ಥಾನ - ವಿಜಯಪುರ

ಕೊಂಡಜ್ಜಿ ಬಸಪ್ಪ ಪರ್ಯಾಯ ಫಲಕ



ದ್ವಿತೀಯ ಸ್ಥಾನ - ಹಾವೇರಿ



ತೃತೀಯ ಸ್ಥಾನ - ಧಾರವಾಡ

## ಕಲಬುರಗಿ ವಿಭಾಗ



ಪ್ರಥಮ ಸ್ಥಾನ - ರಾಯಚೂರು

ಪ್ರೊ. ಪಿ. ಶಿವಶಂಕರ್ ಪರ್ಯಾಯ ಫಲಕ



ದ್ವಿತೀಯ ಸ್ಥಾನ - ಬೀದರ್



ತೃತೀಯ ಸ್ಥಾನ - ಬಳ್ಳಾರಿ

# ಕರ್ನಾಟಕ ರಾಜ್ಯಕ್ಕೆ ರಾಷ್ಟ್ರಮಟ್ಟದ ಪಾರಿತೋಷಕ ಪ್ರಶಸ್ತಿಗಳು

2022–23ನೇ ಸಾಲಿನ ರಾಜ್ಯದ ಸಮಗ್ರ ಅಭಿವೃದ್ಧಿಯನ್ನು ಪರಿಗಣಿಸಿ ಕರ್ನಾಟಕ ರಾಜ್ಯಕ್ಕೆ ರಾಷ್ಟ್ರ ಮಟ್ಟದ 13 ಪಾರಿತೋಷಕ ಮತ್ತು ಪ್ರಶಸ್ತಿಗಳನ್ನು ರಾಷ್ಟ್ರೀಯ ಸಂಸ್ಥೆ, ನವದೆಹಲಿ ಇವರು ರಾಷ್ಟ್ರೀಯ ಪರಿಷತ್ ಸಭೆಯಲ್ಲಿ ನೀಡಿರುತ್ತಾರೆ.

ರಾಜ್ಯ ಮುಖ್ಯ ಆಯುಕ್ತರಾದ ಮಾನ್ಯ ಶ್ರೀ ಪಿ.ಜಿ.ಆರ್. ಸಿಂಧ್ಯ ಇವರ ಮಾರ್ಗದರ್ಶನದಲ್ಲಿ ಮತ್ತು ರಾಜ್ಯ ಸಂಸ್ಥೆಯ ಎಲ್ಲಾ ಪದಾಧಿಕಾರಿಗಳ ಸಹಕಾರದಿಂದ ಕರ್ನಾಟಕ ರಾಜ್ಯದ ಕಾರ್ಯಕ್ರಮ, ಚಟುವಟಿಕೆಗಳು, ಸಭೆಗಳು, ತರಬೇತಿ, ರಾಜ್ಯ, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಸಂಸ್ಥೆಯ ಮಕ್ಕಳ ಮತ್ತು ವಯಸ್ಕ ನಾಯಕರ ನಿಯೋಜನೆ, ಸಮುದಾಯ ಸೇವಾ ಚಟುವಟಿಕೆಗಳು, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ದಿನಾಚರಣೆಗಳು, ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆ, ಗಣತಿ, ಶಿಬಿರ ಕೇಂದ್ರ ಮತ್ತು ಜಿಲ್ಲಾ ಸಂಸ್ಥೆಗಳ ಪ್ರಗತಿ, ಸರ್ಕಾರದ ಅನುದಾನ ಇತ್ಯಾದಿ ಅಂಶಗಳಿಂದ ಕರ್ನಾಟಕ ರಾಜ್ಯದ ಸಮಗ್ರ ಅಭಿವೃದ್ಧಿಯ ವಿಷಯಗಳನ್ನು ಪರಿಗಣಿಸಿ ಈ ಕೆಳಗಿನ ರಾಷ್ಟ್ರ ಮಟ್ಟದ ಪ್ರಶಸ್ತಿ ಮತ್ತು ಪಾರಿತೋಷಕಗಳು ಲಭಿಸಿರುವುದು ಸಂತೋಷ ಹಾಗೂ ಹೆಮ್ಮೆಯ ವಿಷಯ.

| ಕ್ರ.ಸಂ | ಪ್ರಶಸ್ತಿಯ ವಿವರ | ಗಳಿಸಿದ ಸ್ಥಾನ |
|---|---|---|
| 1 | ಸ್ಕೌಟ್ ವಿಭಾಗದ ಮುಖ್ಯ ರಾಷ್ಟ್ರೀಯ ಆಯುಕ್ತರ ಪಾರಿತೋಷಕ ಸ್ಪರ್ಧೆ | ಪ್ರಥಮ ಸ್ಥಾನ |
| 2 | ಗೈಡ್ ವಿಭಾಗದ ಮುಖ್ಯ ರಾಷ್ಟ್ರೀಯ ಆಯುಕ್ತರ ಪಾರಿತೋಷಕ ಸ್ಪರ್ಧೆ | ಪ್ರಥಮ ಸ್ಥಾನ |
| 3 | ಕಬ್ ವಿಭಾಗದ ಸಂಖ್ಯಾವಾರು ಗಣತಿಯ ಹೆಚ್ಚಳ | ತೃತೀಯ ಸ್ಥಾನ |
| 4 | ಸ್ಕೌಟ್ ವಿಭಾಗದ ಸಂಖ್ಯಾವಾರು ಗಣತಿಯ ಹೆಚ್ಚಳ | ತೃತೀಯ ಸ್ಥಾನ |
| 5 | ರೋವರ್ ವಿಭಾಗದ ಸಂಖ್ಯಾವಾರು ಗಣತಿಯ ಹೆಚ್ಚಳ | ದ್ವಿತೀಯ ಸ್ಥಾನ |
| 6 | ಬುಲ್‌ಬುಲ್ ವಿಭಾಗದ ಸಂಖ್ಯಾವಾರು ಗಣತಿಯ ಹೆಚ್ಚಳ | ದ್ವಿತೀಯ ಸ್ಥಾನ |
| 7 | ಗೈಡ್ ವಿಭಾಗದ ಸಂಖ್ಯಾವಾರು ಗಣತಿಯ ಹೆಚ್ಚಳ | ದ್ವಿತೀಯ ಸ್ಥಾನ |
| 8 | ರೇಂಜರ್ ವಿಭಾಗದ ಸಂಖ್ಯಾವಾರು ಗಣತಿಯ ಹೆಚ್ಚಳ | ದ್ವಿತೀಯ ಸ್ಥಾನ |

| | | |
|---|---|---|
| 9 | ಕಬ್ ವಿಭಾಗದ ಶೇಕಡವಾರು ಗಣತಿಯ ಹೆಚ್ಚಳ | ದ್ವಿತೀಯ ಸ್ಥಾನ |
| 10 | ಬುಲ್‌ಬುಲ್ ವಿಭಾಗದ ಶೇಕಡವಾರು ಗಣತಿಯ ಹೆಚ್ಚಳ | ಪ್ರಥಮ ಸ್ಥಾನ |
| 11 | ಗೈಡ್ ವಿಭಾಗದ ಶೇಕಡವಾರು ಗಣತಿಯ ಹೆಚ್ಚಳ | ತೃತೀಯ ಸ್ಥಾನ |
| 12 | ಒಟ್ಟು ಸಂಖ್ಯಾವಾರು ಗಣತಿಯ ಹೆಚ್ಚಳ | ತೃತೀಯ ಸ್ಥಾನ |
| 13 | ಒಟ್ಟು ಶೇಕಡವಾರು ಗಣತಿಯ ಹೆಚ್ಚಳ | ತೃತೀಯ ಸ್ಥಾನ |









# ರಾಜ್ಯ ಮಟ್ಟದ ಸ್ಕೌಟಿಂಗ್ ಸ್ಟೆಮ್ ಶಿಬಿರ



ರಾಜ್ಯ ಮಟ್ಟದ ಸ್ಕೌಟ್ಸ್/ ಗೈಡ್ಸ್ ಮತ್ತು ರೋವರ್ಸ್/ ರೇಂಜರ್ಸ್‌ಗಳಿಗೆ ಸ್ಕೌಟಿಂಗ್ ಸ್ಟೆಮ್ (ಖಛಿಠಿಣಾಣುಟಿಂ ಖಣಜಟ) ಮತ್ತು ಔಷಧೀಯ ಸಸ್ಯಗಳ ಮಾಹಿತಿ ಶಿಬಿರವನ್ನು ರಾಜ್ಯ ಸಂಸ್ಥೆ ಹಾಗೂ ಆಳ್ವಾಸ್ ಶಿಕ್ಷಣ ಸಂಸ್ಥೆ ಆಶ್ರಯದಲ್ಲಿ ಡಿಸೆಂಬರ್ 14 ರಿಂದ 17ರ ವರೆಗೆ ಆಯೋಜಿಸಲಾಗಿತ್ತು. ಸದರಿ ಶಿಬಿರದಲ್ಲಿ 31–ಸ್ಕೌಟ್ಸ್, 17–ರೋವರ್ಸ್, 20–ಗೈಡ್ಸ್ ಮತ್ತು 22–ರೇಂಜರ್ಸ್ ಭಾಗವಹಿಸಿದ್ದರು.

ಡಿಸೆಂಬರ್ 14 ರಂದು ಬೆಳಗ್ಗೆ 11.30 ಗಂಟೆಗೆ ಶಿಬಿರದ ಉದ್ಘಾಟನೆಯನ್ನು ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ಇವರು ನೆರವೇರಿಸಿದರು. ಸಮಾರಂಭದಲ್ಲಿ ಶ್ರೀಮತಿ ಬಿ.ವಿ. ರಾಮಲತಾ, ರಾಜ್ಯ ಜಂಟಿ ಕಾರ್ಯದರ್ಶಿ (ಗೈಡ್)ರವರು, ದಕ್ಷಿಣ ಕನ್ನಡ ಜಿಲ್ಲಾ ಹಾಗೂ ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಡಿಸೆಂಬರ್ 14 ರಂದು ವೇದಗಣಿತ ಲೋಕಾಕ್ಷ, 10 ಸೆಕೆಂಡ್ಸ್ ಸೈನ್ಸ್ ಆಫ್ ಸಕ್ಸಸ್‌ನ ನಿರ್ದೇಶಕರು ಮತ್ತು ಸ್ಥಾಪಕರುಗಳಾದ ಶ್ರೀ ಅಭಿಜಿತ್ ಶೆಟ್ಟಿರವರು ಗಣಿತದಲ್ಲಿನ ಅನೇಕ ಜಟಿಲ ಸಮಸ್ಯೆಗಳನ್ನು ಸರಳವಾಗಿ ಹೇಗೆ ಬಿಡಿಸಿ ಸಾಧಿಸಬಹುದು ಎಂಬುದನ್ನು ಪ್ರಾತ್ಯಕ್ಷಿಕವಾಗಿ ಮಾಡಿ ತೋರಿಸಿದರು.

ಡಿಸೆಂಬರ್ 15 ರಂದು ಮೂಡಬಿದ್ರೆಯ ಮಹಾವೀರ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಶ್ರೀ ರಮೇಶ್ ಭಟ್, ಗ್ರಂಥಗಳು, ತಾರೆಗಳು, ಉಪಗ್ರಹಗಳ ಬಗ್ಗೆ ಪರಿಚಯ ಮಾಡಿಕೊಟ್ಟರು ಮತ್ತು ವೇಗ, ವಾತಾವರಣಗಳ ಬಗ್ಗೆ ಸವಿವರವಾದ ಮಾಹಿತಿಯನ್ನು ನೀಡಿರುವರು.

ಆಳ್ವಾಸ್ ಕಾಲೇಜಿನ ಆನಿಮೇಶನ್ ವಿಭಾಗದ ಹೆಚ್.ಓ.ಡಿ. ಆದ ಶ್ರೀ ರವಿಚಂದ್ರರವರು ಆನಿಮೇಶನ್ ಬಗ್ಗೆ ಭೋದಿಸಿ, ಪ್ರಾತ್ಯಕ್ಷಿಕವಾಗಿ ಮತ್ತು ಪ್ರಾಯೋಗಿಕವಾಗಿ ವಿದ್ಯಾರ್ಥಿಗಳಿಗೆ ತಿಳಿಸಿದರು.

ಡಿಸೆಂಬರ್ 16 ರಂದು ಆಳ್ವಾಸ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ದೂರದರ್ಶನದ ಮಾಹಿತಿ, ಗೂಗಲಿಂಗ್ ಟೆಕ್‌ನಿಕ್, ಸುಲಭ ರೀತಿಯ ಗೂಗಲ್ ಸರ್ಚಿಂಗ್, ಗೂಗಲ್‌ನಲ್ಲಿರುವ ಅನೇಕ ವಿಧಗಳು, ಬಾರ್ ಕೋಡ್ ಇಮೇಜಸ್, ಆಪ್ ತಯಾರಿಕೆ ಮತ್ತು ಬಳಕೆ ಇತ್ಯಾದಿ ವಿಷಯಗಳ ಕುರಿತು ಮಾಹಿತಿಯನ್ನು ಪ್ರಾತ್ಯಕ್ಷಿಕವಾಗಿ ನೀಡಲಾಯಿತು. ಸಿವಿಲ್ ವಿಭಾಗದ ಹೆಚ್.ಓ.ಡಿ.ಯವರಾದ ಡಾ॥ ವಿನಯ್‌ರವರು ಮ್ಯಾಪಿಂಗ್,

ಮ್ಯಾಪ್ ತಯಾರಿಕೆ, ಮ್ಯಾಪ್ ಓದುವುದು, ಸ್ಕೇಲ್, ಮೊಬೈಲ್‌ನಲ್ಲಿ ಜಿ.ಪಿ.ಎಸ್., ಜಿ.ಐ.ಎಸ್. ಬಳಕೆ ಮಾಡುವ ಕುರಿತು ಪ್ರಾಯೋಗಿಕವಾಗಿ ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು.

ಡಿಸೆಂಬರ್ 17 ರಂದು ಸರ್ವಧರ್ಮ ಪ್ರಾರ್ಥನೆಯನ್ನು ನೆರವೇರಿಸಲಾಯಿತು. ಹಕ್ಕಿ ಶಾಸ್ತ್ರಜ್ಞ ಶ್ರೀ ವೃಜುಲಾಲ್ ಎಂ.ವಿ.,ರವರು ಹಕ್ಕಿಗಳ ಚಲನವಲನ, ವಲಸೆ, ಸಂತಾನೋತ್ಪತ್ತಿ, ಬಣ್ಣ, ಕೂಗು, ವರ್ತನೆಗಳ ಬಗ್ಗೆ ಸರಳವಾಗಿ ಮತ್ತು ಸವಿವರವಾಗಿ ತಿಳಿಸಿಕೊಟ್ಟರು. ಪ್ರತಿದಿನ ಸಂಜೆ ವೀರಯೋಧ ಹುತಾತ್ಮ ಕ್ಯಾಪ್ಟನ್ ಶ್ರೀ ಎಂ.ವಿ. ಪ್ರಾಂಜಲ್‌ರವರಿಗೆ ಅರ್ಪಣೆ ಗೈದ ಆಳ್ವಾಸ್ ವಿರಾಸತ್ 2023 ವೀಕ್ಷಣೆಗೆ ಅವಕಾಶವನ್ನು ಕಲ್ಪಿಸಿಕೊಡಲಾಗಿತ್ತು.



## 2023ನೇ ಸಾಲಿನ ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪಿ.ಯು.ಸಿ. ಪ್ರತಿಭಾನ್ವಿತ ಸ್ಕೌಟ್ಸ್, ಗೈಡ್ಸ್ ರೋವರ್ಸ್, ರೇಂಜರ್ಸ್‌ಗಳಿಗೆ ರಾಜ್ಯ ಮಟ್ಟದ ಅಭಿನಂದನಾ ಸಮಾರಂಭ

ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆ ಮೂಡಬಿದಿರೆ ಸ್ಥಳೀಯ ಸಂಸ್ಥೆ ಹಾಗೂ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ (ರಿ.) ಮೂಡಬಿದಿರೆ ಇವರ ಸಹಭಾಗಿತ್ವದಲ್ಲಿ ಡಿಸೆಂಬರ್ 17 ರಂದು ಜಿಲ್ಲಾ ಸ್ಕೌಟ್ಸ್–ಗೈಡ್ಸ್ ಕನ್ನಡ ಭವನ ಸ್ವರಾಜ್ಯ ಮೈದಾನ ಮೂಡಬಿದಿರೆಯಲ್ಲಿ 2022–23 ರಂದು ಜಿಲ್ಲಾ ಸ್ಕೌಟ್ಸ್–ಗೈಡ್ಸ್ ಕನ್ನಡ ಭವನ ಸ್ವರಾಜ್ಯ ಮೈದಾನ ಮೂಡಬಿದಿರೆಯಲ್ಲಿ 2022–23ನೇ ಸಾಲಿನ ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪಿ.ಯು.ಸಿ. ಪ್ರತಿಭಾನ್ವಿತ ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್‌ಗಳಿಗೆ ರಾಜ್ಯ ಮಟ್ಟದ ಅಭಿನಂದನಾ ಸಮಾರಂಭ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾ ಮುಖ್ಯ ಆಯುಕ್ತರಾದ ಡಾ. ಎಂ. ಮೋಹನ್ ಆಳ್ವರವರು ದೀಪ ಬೆಳಗಿಸಿ ಉದ್ಘಾಟಿಸಿದರು.



ಕಾರ್ಯಕ್ರಮದ ಅಧ್ಯಕ್ಷತೆಯನ್ನು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ವಹಿಸಿಕೊಂಡು ಸಾಧನೆಗೈದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ನೀಡಿ ಗೌರವಿಸಿ, ಅಭಿನಂದಿಸಿದರು.

ವೇದಿಕೆಯಲ್ಲಿ ಶ್ರೀ ವಿವೇಕ್ ಆಳ್ವ, ಟ್ರಸ್ಟಿ, ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ, ಶ್ರೀ ಜಯಣ್ಣ, ಸಿ.ಡಿ. ಉಪನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ), ಶ್ರೀ ಕೆ. ಶ್ರೀಪತಿಭಟ್, ಉದ್ಯಮಿಗಳು, ಮೂಡಬಿದಿರೆ, ಶ್ರೀ ಕೆ. ಗಂಗಪ್ಪಗೌಡ, ರಾಜ್ಯ ಕಾರ್ಯದರ್ಶಿ, ಶ್ರೀಮತಿ ಬಿ.ವಿ. ರಾಮಲತ,



ರಾಜ್ಯ ಜಂಟಿ ಕಾರ್ಯದರ್ಶಿ, ಶ್ರೀ ಎಂ. ಪ್ರಭಾಕರ್ ಭಟ್, ರಾಜ್ಯ ಸಂಘಟನಾ ಆಯುಕ್ತರು, ಶ್ರೀಮತಿ ಮಲ್ಲೇಶ್ವರಿ ಜುಜಾರೆ, ರಾಜ್ಯ ರೇಂಜರಿಂಗ್ ಮೇಲ್ವಿಚಾರಕರು, ಶ್ರೀಮತಿ ಜ್ಯೋತಿ ಪೈ, ಜಿಲ್ಲಾ ಗೈಡ್ ಆಯುಕ್ತೆ, ಉಡುಪಿ ಜಿಲ್ಲಾ ಸಂಸ್ಥೆ, ಸ್ಟೆಮ್ ಮತ್ತು ಔಷಧೀಯ ಸಸ್ಯಗಳ ಮಾಹಿತಿ ಶಿಬಿರದ ನಾಯಕರುಗಳಾದ ಶ್ರೀ ವೆಂಕಟ್ ರಾವ್, ಶ್ರೀಮತಿ ಮಧುಶ್ರೀ ಉಪಸ್ಥಿತರಿದ್ದರು.

ರಾಜ್ಯ ಸಹಾಯಕ ಸಂಘಟನಾ ಆಯುಕ್ತರಾದ ಶ್ರೀ ಭರತ್ ರಾಜ್ ಕೆ. ಪ್ರಮಾಣ ಪತ್ರವನ್ನು ವಾಚಿಸಿದರು. ಶ್ರೀ ನವೀನ್ ಚಂದ್ರರವರು ಕಾರ್ಯಕ್ರಮವನ್ನು ನಿರೂಪಿಸಿದರು.



# ರೋವರ್ಸ್-ರೇಂಜರ್ಸ್‌ಗಳಿಗೆ ನಾಯಕತ್ವ ತರಬೇತಿ ಮತ್ತು ದಕ್ಷಿಣ ಕನ್ನಡ ಜಿಲ್ಲಾ ಪ್ರಾಂಶುಪಾಲರ ಸಂಘದ ಡೈರಿ ಬಿಡುಗಡೆ ಮತ್ತು ಶೈಕ್ಷಣಿಕ ಸಮಾವೇಶ ಕಾರ್ಯಕ್ರಮ

ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ದಕ್ಷಿಣ ಕನ್ನಡ ಜಿಲ್ಲೆ ಮತ್ತು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ರಾಜ್ಯ ಸಂಸ್ಥೆ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಪದವಿಪೂರ್ವ ಕಾಲೇಜುಗಳ ಪ್ರಾಂಶುಪಾಲರ ಸಂಘ (ರಿ) ಇವರ ಸಹಯೋಗದಲ್ಲಿ ಡಿಸೆಂಬರ್ 18 ರಂದು ಕೆನರಾ ವಿಕಾಸ್ ಪದವಿಪೂರ್ವ ಕಾಲೇಜು ಮೇರಿಹಿಲ್, ಮಂಗಳೂರು ಇಲ್ಲಿ ಪದವಿಪೂರ್ವ ವಿಭಾಗದ ರೋವರ್ಸ್ ಮತ್ತು ರೇಂಜರ್ಸ್‌ರವರಿಗೆ ನಾಯಕತ್ವ ತರಬೇತಿ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಪ್ರಾಂಶುಪಾಲರ ಸಂಘದ ಡೈರಿ ಬಿಡುಗಡೆ ಮತ್ತು ಶೈಕ್ಷಣಿಕ ಸಮಾವೇಶ ಕಾರ್ಯಕ್ರಮವು ಮಾನ್ಯ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರ ಅಧ್ಯಕ್ಷತೆಯಲ್ಲಿ ನಡೆಯಿತು. ಕಾರ್ಯಕ್ರಮವನ್ನು ಶ್ರೀಮತಿ ಸಿಂಧು ಬಿ. ರೂಪೇಶ್, IAS ಮಾನ್ಯ ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ) ಇವರು ದೀಪ ಬೆಳಗಿಸಿ ಉದ್ಘಾಟಿಸಿದರು.

ವೇದಿಕೆಯಲ್ಲಿ ಶ್ರೀ ಕೆ. ಗಂಗಪ್ಪಗೌಡ, ರಾಜ್ಯ ಕಾರ್ಯದರ್ಶಿ, ಶ್ರೀ ಪ್ರಭಾಕರ್ ಭಟ್, ರಾಜ್ಯ ಸಂಘಟನಾ ಆಯುಕ್ತರು, ಶ್ರೀ ಜಯಣ್ಣ ಸಿ.ಡಿ., ಉಪ ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ), ಶ್ರೀ ಎ.ಎಂ. ವಾಮನ ಕಾಮತ್, ಸಂಚಾಲಕರು ಕೆನರಾ ವಿಕಾಸ್ ಸಮೂಹ ಸಂಸ್ಥೆ, ಶ್ರೀ ಜಯನಂದ ಎನ್. ಸುವರ್ಣ ಅಧ್ಯಕ್ಷರು ಕಾಲೇಜುಗಳ ಪ್ರಾಚಾರ್ಯರ ಸಂಘ, ದ.ಕ., ಶ್ರೀ ಪ್ರತೀಮ್ ಕುಮಾರ್ ಜಿಲ್ಲಾ ಸ್ಕೌಟ್ಸ್ ತರಬೇತಿ ಆಯುಕ್ತರು, ಶ್ರೀ ಎಂ. ಗುರುಮೂರ್ತಿ ಹಿರಿಯ ತರಬೇತುದಾರರು, ಶ್ರೀ ಭರತ್ ರಾಜ್ ಕೆ., ರಾಜ್ಯ ಸಹಾಯಕ ಸಂಘಟನಾ ಆಯುಕ್ತರು ಸಭೆಯಲ್ಲಿ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಜಿಲ್ಲೆಯ ಪ್ರಾಂಶುಪಾಲರು, ರೋವರ್ ಸ್ಕೌಟ್ಸ್ ಲೀಡರ್, ರೇಂಜರ್ ಲೀಡರ್, ರೋವರ್ಸ್ ಮತ್ತು ರೇಂಜರ್ಸ್ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.







# ಏರ್ ಸ್ಕೌಟ್–ಗೈಡ್ ನಾಯಕರ ಮೂಲ ತರಬೇತಿ ಶಿಬಿರ

ರಾಷ್ಟ್ರೀಯ ಮಟ್ಟದ ಏರ್ ಸ್ಕೌಟ್–ಗೈಡ್ ನಾಯಕರುಗಳ ಮೂಲ ತರಬೇತಿ ಶಿಬಿರವನ್ನು ನವೆಂಬರ್ 19 ರಿಂದ 25ರ ವರೆಗೆ ಹಿಂದುಸ್ಥಾನ್ ಏರೋನಾಟಿಕ್ಸ್ ಲಿಮಿಟೆಡ್ (ಹೆಚ್.ಎ.ಎಲ್), ಟೆಕ್ನಿಕಲ್ ಟ್ರೈನಿಂಗ್ ಇನ್ಸ್‌ಟಿಟ್ಯೂಟ್, ಹೆಚ್.ಎ.ಎಲ್. ರೋವರ್ ಸ್ಕೌಟ್ ಡೆನ್, ಹೆಚ್.ಎ.ಎಲ್. ಪ್ರಿಮಿಸಸ್, ಬೆಂಗಳೂರು, ಕರ್ನಾಟಕ ಇಲ್ಲಿ ಆಯೋಜಿಸಲಾಗಿತ್ತು. 60 ಏರ್ ಸ್ಕೌಟರ್ಸ್–ಗೈಡರ್ಸ್‌ಗಳು ಭಾಗವಹಿಸಿದ್ದರು.

ಶ್ರೀ ಪ್ರದೀಪ್‌ಕುಮಾರ್, ಜನರಲ್ ಮ್ಯಾನೇಜರ್ (ಹೆಚ್.ಆರ್), ಬಿ.ಸಿ, ಹೆಚ್.ಎ.ಎಲ್.ರವರು ದೀಪ ಬೆಳಗುವ ಮೂಲಕ ತರಬೇತಿ ಶಿಬಿರದ ಉದ್ಘಾಟನೆಯನ್ನು ನೆರವೇರಿಸಿದರು. ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಶ್ರೀ ಮಹೇಶ್ ಅಂಗಡಿ, ಅಧ್ಯಕ್ಷರು, ಹಿಂದುಸ್ಥಾನ್ ಏರೋನಾಟಿಕ್ ಎಂಪ್ಲಾಯಿನ್ ಅಸೋಸಿಯೇಶನ್ ಹಾಗೂ ಕ್ಯಾಪ್ಟನ್ ಪ್ರಭಾತ್‌ಷಾ, ಎ.ಜಿ.ಎಂ., ಹೆಚ್.ಎ.ಎಲ್.ರವರು ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಶ್ರೀ ಆಂಡ್ರೀವ್ ಸಿವೆಸ್ಟರ್, ಆಲಕೇಶ್ ಸೈಕಿಯಾ, ನಿವೃತ್ತ ವಿಂಗ್ ಕಮಾಂಡರ್, ಶ್ರೀ ಮುತ್ತಯ್ಯ, ಚೀಫ್ ಮ್ಯಾನೇಜರ್ ಫೈರ್ ಆಫೀಸರ್, ಶ್ರೀ ಸುರೇಶ್, ಎ.ಜಿ.ಎಂ., ಶ್ರೀ ಸೆಂತಿಲ್ ಕುಮಾರ್, ಶ್ರೀ ಧನಪಾಲ್, ಶ್ರೀ ಚಿನ್ನಸ್ವಾಮಿ ರೆಡ್ಡಿ, ರಾಜ್ಯ ಆಯುಕ್ತರು ಸ್ಕೌಟ್ (ವಯಸ್ಕ ಸಂಪನ್ಮೂಲ), ಕರ್ನಾಟಕರವರು ಹಾಗೂ ಕರ್ನಾಟಕ ರಾಜ್ಯದ ಅನೇಕ ನಾಯಕರುಗಳು ಏರ್ ಸ್ಕೌಟ್–ಗೈಡ್‌ಗೆ ಸಂಬಂಧಿಸಿದಂತೆ ಉತ್ತಮವಾಗಿ ತರಬೇತಿ ನೀಡಿದರು.

ಸಮಾರೋಪ ಸಮಾರಂಭದಲ್ಲಿ ಶ್ರೀಮತಿ ಗೀತಾ ನಟರಾಜ್‌ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದರು. ಶ್ರೀ ಪ್ರಭಾಕರ್ ಭಟ್, ರಾಜ್ಯ ಸಂಘಟನಾ ಆಯುಕ್ತರು (ಸ್ಕೌ) ಹಾಗೂ ಶ್ರೀಮತಿ ಮಾಲತಿ, ಎ.ಎಲ್.ಟಿ. (ಗೈ)ರವರು ಶಿಬಿರದ ನಾಯಕರುಗಳಾಗಿ ಕಾರ್ಯ ನಿರ್ವಹಿಸಿದರು. ಶ್ರೀ ಚಕ್ರವರ್ತಿರವರು ಶಿಬಿರದ ಕೊ–ಆರ್ಡಿನೇಟರ್ ಆಗಿ ಕಾರ್ಯನಿರ್ವಹಿಸಿದರು. ಶ್ರೀ ನಾಗೇಶ್. ಆರ್. ಶಿವಪುರ್, ರಾಜ್ಯ ತರಬೇತಿ ಆಯುಕ್ತರು(ಸ್ಕೌ), ಶ್ರೀಮತಿ ಕುಮಾರಿ ಹೊನ್ನಮ್ಮ, ಎ.ಎಸ್.ಓ.ಸಿ.(ಗೈ) ಮತ್ತು ಶ್ರೀಮತಿ ಗಾಯತ್ರಿಗೌಡ, ಎಲ್.ಟಿ.(ಗೈ)ರವರುಗಳು ಶಿಬಿರದ ಸಂಪೂರ್ಣ ಜವಾಬ್ದಾರಿಯನ್ನು ವಹಿಸಿಕೊಂಡಿದ್ದರು. ಶ್ರೀ ನಂದಕುಮಾರ್, RSL, ಶ್ರೀ ಆದರ್ಶ ಕುಮಾರ್, RSL ಹಾಗೂ ಶ್ರೀ ಶಿವಪ್ಪ, RSL, ಹೆಚ್.ಎ.ಎಲ್. ರೋವರ್ ಕ್ರ್ಯೂರವರುಗಳು ಶಿಬಿರದ ಯಶಸ್ವಿಗೆ ಸಹಕರಿಸಿದರು.





# ರಾಷ್ಟ್ರಮಟ್ಟದ ರೋವರ್–ರೇಂಜರ್ ಕಾರ್ನಿವಲ್

ರಾಜ್ಯ ಸಂಸ್ಥೆ ವತಿಯಿಂದ ರಾಷ್ಟ್ರೀಯ ರೋವರ್–ರೇಂಜರ್ ಕಾರ್ನಿವಲ್ ಅನ್ನು ಡಿಸೆಂಬರ್ 21 ರಿಂದ 25ರ ವರೆಗೆ ಜೈನ್ ಹೆರಿಟೇಜ್ ಶಾಲೆ, ಬೆಳಗಾವಿಯಲ್ಲಿ, ಬೆಳಗಾವಿ ಜಿಲ್ಲಾ ಸಂಸ್ಥೆ ಹಾಗೂ ಜೈನ್ ಹೆರಿಟೇಜ್ ಶಾಲೆ, ಬೆಳಗಾವಿಯ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಈ ಕಾರ್ಯಕ್ರಮವು ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರ ಮಾರ್ಗದರ್ಶನದಲ್ಲಿ ಮತ್ತು ಶ್ರೀ ಗಜಾನನ ಬಿ. ಮನ್ನೀಕೇರಿ, ರಾಜ್ಯ ಉಪಾಧ್ಯಕ್ಷರು ಮತ್ತು ಜಿಲ್ಲಾ ಮುಖ್ಯ ಆಯುಕ್ತರು, ಬೆಳಗಾವಿ ಇವರ ನೇತೃತ್ವದಲ್ಲಿ ನಡೆಯಿತು. ಶ್ರೀಮತಿ ಸುರೇಖ ಶ್ರೀವಾತ್ಸವ, ಉಪನಿರ್ದೇಶಕರು, ರಾಷ್ಟ್ರೀಯ ಸಂಸ್ಥೆ, ನವದೆಹಲಿ ಇವರು ಕಾರ್ನಿವಲ್‌ನ ನಾಯಕರಾಗಿದ್ದರು.

ರಾಷ್ಟ್ರೀಯ ಮಟ್ಟದ ರೋವರ್–ರೇಂಜರ್ ಕಾರ್ನಿವಲ್ ಅನ್ನು ಕರ್ನಾಟಕ ವಿಧಾನ ಪರಿಷತ್‌ನ ಸಭಾಪತಿ ಶ್ರೀ ಬಸವರಾಜ್ ಹೊರಟ್ಟಿರವರು ಉದ್ಘಾಟಿಸಿದರು. ಸಭೆಯನ್ನು ಶ್ರೀ ಗಜಾನನ ಬಿ. ಮನ್ನೀಕೇರಿರವರು ಆತ್ಮೀಯವಾಗಿ ಸ್ವಾಗತಿಸಿದರು. ಶ್ರೀ ಬಿ.ಹೆಚ್.ಎಂ. ದಾರುಕೇಶ, ವಿಜ್ಞಾನಿ ಮತ್ತು ಸಹಾಯಕ ನಿರ್ದೇಶಕರು, ಇಸ್ರೋ, ಕೇಂದ್ರ ಕಛೇರಿ, ಬೆಂಗಳೂರು, ಶ್ರೀಮತಿ ಶ್ರದ್ಧಾ ಖಟವಟೆ, ನಿರ್ದೇಶಕರು, ಜೈನ್ ಹೆರಿಟೇಜ್ ಶಾಲೆ, ಬೆಳಗಾವಿ ಹಾಗೂ ಶ್ರೀಮತಿ ಬಿ.ವಿ. ರಾಮಲತಾ, ರಾಜ್ಯ ಆಯುಕ್ತರು (ಗೈಡ್) ವಯಸ್ಕ ಸಂಪನ್ಮೂಲರವರು ಉಪಸ್ಥಿತರಿದ್ದರು. ಶ್ರೀ ಬಸವರಾಜ್ ಹೊರಟ್ಟಿರವರು ತಮ್ಮ ಉದ್ಘಾಟನಾ ಭಾಷಣದಲ್ಲಿ ತಮ್ಮ ಜೀವನ ಮತ್ತು ಹೇಗೆ ಶಿಸ್ತು ಅವರನ್ನು ಈ ಎತ್ತರಕ್ಕೆ ತಲುಪುವಂತೆ ಮಾಡಿತು ಎಂಬುದರ ಕುರಿತು ಮಾತನಾಡಿದರು.

ಶ್ರೀ ಬಿ.ಹೆಚ್.ಎಂ. ದಾರುಕೇಶರವರು ಇಸ್ರೋದ ಭವಿಷ್ಯದ ಗುರಿಗಳು ಮತ್ತು ಮಹತ್ವಾಕಾಂಕ್ಷೆಗಳ ಬಗ್ಗೆ ಸಭೆಗೆ ವಿವರಿಸಿದರು. ಭಾರತೀಯ ಮಹಿಳೆ ಚಂದ್ರನ ಮೇಲೆ ರಂಗೋಲಿ ಹಾಕುವುದನ್ನು ನೋಡುವ ಗುರಿಯನ್ನು ಇಸ್ರೋ ಹೊಂದಿದೆ ಎಂದು ತಿಳಿಸಿದರು. ರೋವರ್ಸ್–ರೇಂಜರ್ಸ್‌ಗಳ ವರ್ಣರಂಜಿತ ಜಾನಪದ ನೃತ್ಯಗಳು ಎಲ್ಲರ ಕಣ್ಮನಗಳನ್ನು ಸೆಳೆಯಿತು. ಶ್ರೀ ಪಿ.ಜಿ.ಆರ್.ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ತಮ್ಮ ಭಾಷಣದಲ್ಲಿ ಮುಖ್ಯ ಅತಿಥಿಗಳಾದ ಶ್ರೀ ಬಸವರಾಜ್ ಹೊರಟ್ಟಿ, ಕರ್ನಾಟಕ ವಿಧಾನ ಪರಿಷತ್‌ನ ಸಭಾಪತಿ ಮತ್ತು ಶ್ರೀಮತಿ ಶ್ರದ್ಧಾ ಖಟವಟೆ, ನಿರ್ದೇಶಕರು, ಜೈನ್ ಹೆರಿಟೇಜ್ ಶಾಲೆ ರವರಿಗೆ ಹೃತ್ಪೂರ್ವಕವಾದ ಕೃತಜ್ಞತೆಗಳನ್ನು ಅರ್ಪಿಸಿದರು. ಶ್ರೀಮತಿ ಶ್ರದ್ಧಾ ಖಟವಟೆ, ನಿರ್ದೇಶಕರು, ಜೈನ್ ಹೆರಿಟೇಜ್ ಶಾಲೆ ಇವರು ಎಲ್ಲರಿಗೂ ಧನ್ಯವಾದಗಳನ್ನು ಸಲ್ಲಿಸಿದರು.

ಹೊರಾಂಗಣದಲ್ಲಿ ಕಲಿತ ವಿಷಯಗಳು ಮತ್ತು ಹೊಸ ಸ್ನೇಹಿತರನ್ನು ಭೇಟಿಯಾದ ಅನುಭವಗಳು ಹೊಸ ಕಲಿಕೆಯ ಕಡೆಗೆ ನಮ್ಮ ಮನೋಭಾವನ್ನು ಸೆಳೆಯುತ್ತವೆ. ಈ ಕಾರ್ನಿವಲ್ ಹೊಸ ಕಲಿಕೆ ಮತ್ತು ಉತ್ತಮ ನೆನಪುಗಳಿಗೆ ಸಾಕ್ಷಿಯಾಯಿತು.

ಕಾರ್ನಿವಲ್‌ನ ಎರಡನೇ ದಿನ ಡಾ॥ ಬಿ.ಹೆಚ್.ಎಂ. ದಾರುಕೇಶ್‌ರವರು ರೋವರ್ಸ್–ರೇಂಜರ್ಸ್‌ಗಳಿಗೆ ಒಂದು ಪ್ರಬುದ್ಧ ಅಧಿವೇಶನದ ಅನುಭವವನ್ನು ನೀಡಿದರು. ಈ ಬೌದ್ಧಿಕ ಪ್ರಯಾಣದ ನಂತರ ಕಾರ್ನಿವಲ್ ರಾಜ್ಯ ಪ್ರದರ್ಶನಗಳಲ್ಲಿ ಭಾಗವಹಿಸಿದ್ದ ರಾಜ್ಯಗಳು ಭಾರತದ ಸಾಂಸ್ಕೃತಿಕ ವಸ್ತ್ರಗಳ ಪ್ರದರ್ಶನ ನೃತ್ಯಗಳು, ವಾದ್ಯಗಳು, ಉತ್ಸವಗಳು ಮತ್ತು ಆಹಾರಗಳ ಮೂಲಕ ತಮ್ಮ ವಿಶಿಷ್ಟ ಪರಂಪರೆಗಳನ್ನು ಅದ್ಭುತವಾಗಿ ಪ್ರದರ್ಶಿಸಿದರು. ಜ್ಞಾನ ಮತ್ತು ವೈವಿಧ್ಯತೆಯ ಸಾಮರಸ್ಯ ಆಚರಣೆಯೊಂದಿಗೆ ದಿನವು ಪ್ರತಿಧ್ವನಿಸಿತು. ಹರಿಯಾಣದ ಬೋರ್ಲಾ ಮತ್ತು ಶಿಂಗಾರ್ ಪಟ್ಟಿ, ಹಿಮಾಚಲ ಪ್ರದೇಶದ ಕಾಂಗ್ರಿ ಮತ್ತು ಫಿರಾನ್, ಕೇರಳದ ಮೋಹಿನಿಯಾಟಮ್, ಅಸ್ಸಾಂನ ಬಿಹು, ಪಂಜಾಬ್‌ನ ಗೋಲ್ಡನ್ ದೇವಾಲಯ ಹಾಗೂ ಕರ್ನಾಟಕದ ಕೊಪ್ಪಳ ದೇವಾಲಯ ಹಾಗೂ ಕೋಲಾಟ ಪ್ರತಿಯೊಬ್ಬರ ಗಮನವನ್ನು ಸೆಳೆಯಿತು.

ನಂತರ ವಿವಿಧ ರಾಜ್ಯಗಳ ರೋವರ್ಸ್–ರೇಂಜರ್ಸ್‌ಗಳಿಂದ ರಾಜ್ಯ ಪ್ರದರ್ಶನ ಮತ್ತು ಆಹಾರ ಮೇಳ ನಡೆಯಿತು. ಪ್ರತಿಯೊಂದು ರಾಜ್ಯವು ತಮ್ಮ ಕರಕುಶಲತೆ, ಆಹಾರ ಸಂಸ್ಕೃತಿ ಮತ್ತು ಅವರ ಕಲೆಗಳನ್ನು ಪ್ರದರ್ಶಿಸಿದರು. ಉತ್ತರಾಖಂಡದ ಕೈಮಗ್ಗ, ಗುಳೇದ ಗುಡ್ಡದ ಆಹಾರ, ಕುಮಾಂ ಟೋಪಿ ಮತ್ತು ಗರ್‌ವಾಲ್ ಟೋಪಿ, ಉತ್ತರ ಪ್ರದೇಶದ ಬನಾರಸ್ ಸೀರೆ, ಹಿಮಾಚಲದ ಕುಲ್ಲು ಟೋಪಿ ಮತ್ತು ಶಾಲು, ಅಸ್ಸಾಂನ ಮೇಖ್ಲಾ ಚಾದರ್, ರಾಜಸ್ಥಾನ್ ಉಡುಪುಗಳು, ಪಶ್ಚಿಮ ಬಂಗಾಳ ಮತ್ತು ಮಧ್ಯಪ್ರದೇಶದ ಧೋತಿ ಕುರ್ತ ಹಾಗೂ ಕರ್ನಾಟಕದಿಂದ ಸಾಂಪ್ರದಾಯಿಕ ಉಡುಗೆ ಮತ್ತು ಆಭರಣಗಳು, ಭಾರತೀಯ ಸಾಂಪ್ರದಾಯಿಕ ಉಡುಪುಗಳ ರೋಮಾಂಚಕ ಸಂಗ್ರಹವನ್ನು ಪ್ರದರ್ಶಿಸಲಾಯಿತು.

ರೋವರ್ಸ್ ಮತ್ತು ರೇಂಜರ್ಸ್‌ಗಳಿಂದ ಭಾರತದ ವೈವಿಧ್ಯಮಯ ಆಹಾರ ಸಂಸ್ಕೃತಿಯನ್ನು ಒಂದೇ ಸೂರಿನಡಿ ತರಲಾಯಿತು. ರೋವರ್ಸ್ ಮತ್ತು ರೇಂಜರ್ಸ್‌ಗಳ ನಡುವೆ ಆಹಾರ ಸಂಸ್ಕೃತಿಯನ್ನು ವಿನಿಮಯ ಮಾಡಿಕೊಳ್ಳುವ ಅವಕಾಶಕ್ಕಾಗಿ ಆಹಾರ ಮಳಿಗೆಗಳನ್ನು ಪ್ರದರ್ಶಿಸಲಾಯಿತು. ಬನಾರಸಿ ಪಾನ್, ಭೇಲ್, ರೇವಡಿ, ಉತ್ತರ ಕರ್ನಾಟಕದ ಕಡಕ್ ರೊಟ್ಟಿ, ಚಟ್ನಿ, ವಿವಿಧ ಉಪ್ಪಿನಕಾಯಿಗಳು, ಅಸ್ಸಾಂ ಟೀ, ಕಹ್ವಾ, ಕೇಸರ್, ವಿವಿಧ ರಾಜ್ಯಗಳ ಒಣ ಹಣ್ಣುಗಳ ಗಿಡಮೂಲಿಕೆಗಳು, ಫಿರ್ನಿ, ರಬ್ಡಿ, ಚುರ್ಮಾ, ಗಜಕ್ ಮುಂತಾದ ಪ್ರಸಿದ್ಧ ಭಕ್ಷ್ಯಗಳನ್ನು ಇತರೆ ರಾಜ್ಯಗಳವರು ಸವಿಯಲು ಅವಕಾಶವಾಯಿತು.

ನಂತರ ಭಾಗವಹಿಸಿದ ಎಲ್ಲಾ ರೋವರ್ಸ್–ರೇಂಜರ್ಸ್‌ಗಳು ಜೈನ್ ಹೆರಿಟೇಜ್ ಶಾಲೆಯಿಂದ ರಾಣಿ ಚನ್ನಮ್ಮ ನಗರದ ವಸತಿ ಪ್ರದೇಶದ ಮೂಲಕ ಘೋಷಣೆಗಳನ್ನು ಮಾಡುತ್ತಾ ಪಥಸಂಚಲದಲ್ಲಿ ಹಿಂತಿರುಗಿದರು. ಈ ಪಥಸಂಚಲನದಿಂದ ಸ್ಕೌಟ್–ಗೈಡ್ ಚಳುವಳಿಯ ಪ್ರಚಾರ ಭಾರತೀಯ ಸಂಸ್ಕೃತಿಯ ಅನಾವರಣವಾಯಿತು.

ಮುಂದಿನ ಕಾರ್ಯಕ್ರಮ "ಜಾನಪದ ನೃತ್ಯ"– ವಿವಿಧ ರಾಜ್ಯಗಳ ರೋವರ್ಸ್ ಮತ್ತು ರೇಂಜರ್ಸ್‌ಗಳು ವಿವಿಧ ರಾಜ್ಯಗಳ ಸಾಂಪ್ರದಾಯಿಕ ಜಾನಪದ ನೃತ್ಯಗಳ ಮೂಲಕ ಆಯಾ ಪ್ರದೇಶದ ಶ್ರೀಮಂತ ಇತಿಹಾಸ ಮತ್ತು ಸಂಸ್ಕೃತಿಯನ್ನು ಪ್ರಸ್ತುತಪಡಿಸಿದರು. ಈ ನೃತ್ಯಗಳು ಭಾರತದ ಪರಂಪರೆ ಮತ್ತು ಸಂಪ್ರದಾಯಗಳ ವೈವಿಧ್ಯತೆಯಲ್ಲಿ ಏಕತೆಯನ್ನು ಪ್ರತಿಬಿಂಬಿಸಿದವು.

ಕಾರ್ನಿವಲ್‌ನ ಮೂರನೇಯ ದಿನ, ಒಂದು ಗುಂಪು ರೋವರ್–ರೇಂಜರ್‌ಗಳನ್ನು ದೇಶಭಕ್ತಿ, ತ್ಯಾಗ ಮತ್ತು ನಮ್ಮ ಸೈನಿಕರು ದೇಶವನ್ನು ಕಾಪಾಡಲು ಪಡೆಯುವ ಶಿಸ್ತಿನ ತರಬೇತಿಗಳ ಬಗ್ಗೆ ಅರಿವು ಮೂಡಿಸಲು ಮರಾಠ ಲೈಟ್ ಇನ್‌ಫೆಂಟರಿ ರೆಜಿಮೆಂಟ್ ಸೆಂಟರ್‌ಗೆ ಕರೆದೊಯ್ಯಲಾಯಿತು. ಅಲ್ಲಿ ರೆಜಿಮೆಂಟ್ ಮತ್ತು ತರಬೇತಿ ಕೇಂದ್ರದ ಇತಿಹಾಸವನ್ನು ಕಿರುಚಿತ್ರದ ಮೂಲಕ ಪರಿಚಯಿಸಲಾಯಿತು. ನಂತರ ತರಬೇತಿ ನೀಡುತ್ತಿರುವ ಸ್ಥಳ, ಶೂಟಿಂಗ್ ರೇಂಜ್ ಮತ್ತು ಯುದ್ಧದಲ್ಲಿ ನಡೆಯುವ ವಿವಿಧ ಚಟುವಟಿಕೆಗಳನ್ನು ಪ್ರತ್ಯಕ್ಷವಾಗಿ ತೋರಿಸಲಾಯಿತು. ಇನ್ನೊಂದು ರೋವರ್–ರೇಂಜರ್ಸ್‌ಗಳ ಗುಂಪನ್ನು ಕಮಲ್ ಬಸದಿಗೆ ಕರೆದೊಯ್ಯಲಾಯಿತು. ಅಲ್ಲಿ ವಿದ್ಯಾರ್ಥಿಗಳು ರಾಮಕೃಷ್ಣ ಮಿಷನ್‌ನಲ್ಲಿ ಜೈನ ತತ್ವಶಾಸ್ತ್ರವನ್ನು ಆಲಿಸಿದರು. ಮಧ್ಯಾಹ್ನ ಭೋಜನದ ನಂತರ, ರಸಪ್ರಶ್ನೆ ಮತ್ತು ಯುವವೇದಿಕೆಯ ವಿಷಯ "ಆರೋಗ್ಯಕರ ಪರಿಸರವನ್ನು ಬೆಳೆಸುವುದರಲ್ಲಿ ಯುವಕರ ಪಾತ್ರ" ಈ ಎರಡು ಸ್ಪರ್ಧೆಗಳು ನಡೆದವು. ಎರಡೂ ಸ್ಪರ್ಧೆಗಳಲ್ಲಿ ರೋವರ್ಸ್–ರೇಂಜರ್ಸ್‌ಗಳು ಬಹಳ ಉತ್ಸಾಹದಿಂದ ಭಾಗವಹಿಸಿದ್ದರು.

ಈ 5 ದಿನಗಳ ರಾಷ್ಟ್ರೀಯ ರೋವರ್–ರೇಂಜರ್ ಕಾರ್ನಿವಲ್‌ನ ಸಮಾರೋಪ ಸಮಾರಂಭವನ್ನು 24 ಡಿಸೆಂಬರ್ 2023 ರಂದು ಹಮ್ಮಿಕೊಳ್ಳಲಾಗಿತ್ತು. ಶ್ರೀ ಎನ್.ಎಸ್. ಬೋಸರಾಜು, ಸಚಿವರು, ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ, ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು,ಭಾ.ಸ್ಕೌ&ಗೈ, ಕರ್ನಾಟಕ, ಶ್ರೀಮತಿ ರೋಹಿಣಿ. ಕೆ.ಬಿ, ಪ್ರಾಂಶುಪಾಲರು, ಜೈನ್ ಹೆರಿಟೇಜ್ ಶಾಲೆ, ಶ್ರೀಮತಿ ಅಮೀ ದೋಷಿ, ಮುಖ್ಯ ಆಡಳಿತಾಧಿಕಾರಿ, ಜೈನ್ ಹೆರಿಟೇಜ್ ಶಾಲೆ, ಶ್ರೀಮತಿ ಸುರೇಖ ಶ್ರೀವಾತ್ಸವ, ಉಪನಿರ್ದೇಶಕರು, ರಾಷ್ಟ್ರೀಯ ಸಂಸ್ಥೆ, ನವದೆಹಲಿ, ಶ್ರೀ ಗಜಾನನ ಬಿ. ಮನ್ನಿಕೆರಿ, ಜಿಲ್ಲಾ ಮುಖ್ಯ ಆಯುಕ್ತರು, ಬೆಳಗಾವಿ, ಶ್ರೀ ಜಯಕುಮಾರ್, ಹೆಬ್ಬಿ, ಅಧ್ಯಕ್ಷರು, ಕರ್ನಾಟಕ ರಾಜ್ಯ ಶಿಕ್ಷಕರ ಸಂಘ, ಬೆಳಗಾವಿ ಹಾಗೂ ಮೇಜರ್ ಅಭಿಷೇಕ್ ಕಶ್ಯಪ್, ಮರಾಠ ಲೈಟ್ ಇನ್‌ಫೆಂಟರಿ ರೆಜಿಮೆಂಟ್ ಸೆಂಟರ್ ಈ ಸಮಾರಂಭದಲ್ಲಿ ಉಪಸ್ಥಿತರಿದ್ದರು.





ಶ್ರೀ ಎನ್.ಎಸ್.ಬೋಸರಾಜು, ಮಾನ್ಯ ಸಚಿವರು, ಜೈನ್ ಹೆರಿಟೇಜ್ ಶಾಲಾ ದಳಕ್ಕೆ ದೊರೆತ ಪ್ರಧಾನ ಮಂತ್ರಿ ಪಾರಿತೋಷಕ ಪ್ರಶಸ್ತಿ, ರಾಜ್ಯ ಸಂಸ್ಥೆಯಿಂದ ಗುರುತಿಸಿ ಉತ್ತಮ ಶಿಕ್ಷಕಿ ಪ್ರಶಸ್ತಿ ಮತ್ತು ಸೇವಾ ಪ್ರಮಾಣ ಪತ್ರಕ್ಕೆ ಭಾಜನರಾದ ಶ್ರೀಮತಿ ಪಲ್ಲವಿ ನಾಡಕರ್ಣಿರವರನ್ನು ಹಾಗೂ ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕಿ ಪ್ರಶಸ್ತಿ ಪುರಸ್ಕೃತರಾದ ಶ್ರೀಮತಿ ವಂದನಾರೈರವರನ್ನು ಸನ್ಮಾನಿಸಿದರು. ರೋವರ್ಸ್- ರೇಂಜರ್ಸ್‌ಗಳು ವರ್ಣರಂಜಿತ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರಸ್ತುತ ಪಡಿಸಿದರು. ವಿವಿಧ ಕಾರ್ಯಕ್ರಮಗಳಲ್ಲಿ ವಿಜೇತರಾದ ರೋವರ್ಸ್-ರೇಂಜರ್ಸ್‌ಗಳಿಗೆ ಮುಖ್ಯ ಅತಿಥಿಗಳು ಬಹುಮಾನಗಳನ್ನು ವಿತರಿಸಿದರು.

ಈ ಕಾರ್ನಿವಲ್‌ನಲ್ಲಿ 16 ರಾಜ್ಯಗಳಿಂದ ಒಟ್ಟು 727 ರೋವರ್ಸ್ ಮತ್ತು ರೇಂಜರ್ಸ್‌ಗಳು ಭಾಗವಹಿಸಿದ್ದರು. ಅದರಲ್ಲಿ ಕರ್ನಾಟಕ ರಾಜ್ಯದಿಂದ 536 ರೋವರ್ಸ್-ರೇಂಜರ್ಸ್ ಮತ್ತು ದಳನಾಯಕರು ಭಾಗವಹಿಸಿದ್ದರು. ರೋವರ್-ರೇಂಜರ್ ಕಾರ್ನಿವಲ್‌ನ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿಕೆಯನ್ನು ಗುರುತಿಸಿ ರಾಜಸ್ಥಾನ ರಾಜ್ಯಕ್ಕೆ ಪ್ರಥಮ ಸ್ಥಾನ, ಕರ್ನಾಟಕ ರಾಜ್ಯಕ್ಕೆ ದ್ವಿತೀಯ ಸ್ಥಾನ ಹಾಗೂ ಹರಿಯಾಣ ರಾಜ್ಯಕ್ಕೆ ತೃತೀಯ ಸ್ಥಾನವನ್ನು ನೀಡಲಾಯಿತು.



ಶ್ರೀಮತಿ ಮಂಜುಳ. ಸಿ., ರಾಜ್ಯ ಸಂಘಟನೆ ಆಯುಕ್ತೆ (ಗೈ.), ಸಹಾಯಕ ರಾಜ್ಯ ಸಂಘಟನಾ ಆಯುಕ್ತರುಗಳಾದ ಶ್ರೀ ಡಿ.ಬಿ. ಅತ್ತಾರ್ ಮತ್ತು ಶ್ರೀ ವಿಠಲ್ ಬಾಚಗುಂಡಿ ಇವರುಗಳು ಶಿಬಿರದ ವ್ಯವಸ್ಥೆಗಳನ್ನು ಉತ್ತಮ ರೀತಿಯಲ್ಲಿ ನಿರ್ವಹಿಸಿದರು.



## ಜನವರಿ 2024ರ ಕಾರ್ಯಕ್ರಮಗಳು

| ಕ್ರ.ಸಂ | ಕಾರ್ಯಕ್ರಮದ ಹೆಸರು | ದಿನಾಂಕ | ಸ್ಥಳ |
|---|---|---|---|
| 1. | ರಾಜ್ಯ ಮಟ್ಟದ ಹೆಚ್.ಡಬ್ಲ್ಯೂ.ಬಿ. ತರಬೇತಿ ಶಿಬಿರ (ಕಬ್, ಸ್ಕೌಟ್ಸ್, ರೋವರ್, ಬುಲ್‌ಬುಲ್ ಗೈಡ್ ರೇಂಜರ್ ವಿಭಾಗ) | 04-01-2024 ರಿಂದ 10-01-2024 | ಡಾ|| ಅನಿಬೆಸೆಂಟ್ ರಾಜ್ಯ ತರಬೇತಿ ಕೇಂದ್ರ, ದೊಡ್ಡಬಳ್ಳಾಪುರ |
| 2. | ರಾಷ್ಟ್ರೀಯ ರಸ್ತೆ ಸುರಕ್ಷತಾ ವಾರ | 11-01-2024 ರಿಂದ 17-01-2024 | ರಾಜ್ಯ, ಜಿಲ್ಲಾ, ಸ್ಥಳೀಯ ಹಾಗೂ ದಳಗಳ ಹಂತದಲ್ಲಿ |
| 3. | ರಾಷ್ಟ್ರೀಯ ಯುವ ದಿನಾಚರಣೆ | 12-01-2024 | ರಾಜ್ಯ, ಜಿಲ್ಲಾ, ಸ್ಥಳೀಯ ಹಾಗೂ ದಳಗಳ ಹಂತದಲ್ಲಿ |
| 4. | ರಾಜ್ಯಪುರಸ್ಕಾರ ರ್‍ಯಾಲಿ | 19-01-2024 | ರಾಜಭವನ, ಬೆಂಗಳೂರು |
| 5. | ರಾಜ್ಯ ಮಟ್ಟದ ಕಬ್-ಬುಲ್‌ಬುಲ್ ಉತ್ಸವ | 22-01-2024 ರಿಂದ 26-01-2024 | ಸ್ಕೌಟ್ಸ್-ಗೈಡ್ಸ್ ಕನ್ನಡ ಭವನ ಮೂಡಬಿದ್ರೆ, ದಕ್ಷಿಣ ಕನ್ನಡ |
| 6. | ನೇತಾಜಿ ಸುಭಾಷ್ ಚಂದ್ರ ಬೋಸ್ ಜಯಂತಿ | 23-01-2024 | ರಾಜ್ಯ, ಜಿಲ್ಲಾ, ಸ್ಥಳೀಯ ಹಾಗೂ ದಳಗಳ ಹಂತದಲ್ಲಿ |
| 7. | ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ | 24-01-2024 | ರಾಜ್ಯ, ಜಿಲ್ಲಾ, ಸ್ಥಳೀಯ ಹಾಗೂ ದಳಗಳ ಹಂತದಲ್ಲಿ |
| 8. | ರಾಷ್ಟ್ರೀಯ ಮತದಾರರ ದಿನಾಚರಣೆ | 25-01-2024 | ರಾಜ್ಯ, ಜಿಲ್ಲಾ, ಸ್ಥಳೀಯ ಹಾಗೂ ದಳಗಳ ಹಂತದಲ್ಲಿ |
| 9. | ಗಣರಾಜ್ಯೋತ್ಸವ | 26-01-2024 | ರಾಜ್ಯ, ಜಿಲ್ಲಾ, ಸ್ಥಳೀಯ ಹಾಗೂ ದಳಗಳ ಹಂತದಲ್ಲಿ |

- ರಾಜ್ಯ ಕಾರ್ಯದರ್ಶಿ



# ಜಿಲ್ಲಾ ವಾರ್ತೆಗಳು

## ಬೆಳಗಾವಿ

ಡಿಸೆಂಬರ್ 09 ರಂದು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಹಾಗೂ ಸ್ಥಳೀಯ ಸಂಸ್ಥೆ ಹುಕ್ಕೇರಿ ಇವರ ಸಹಯೋಗದಲ್ಲಿ ಸರಕಾರಿ ಉರ್ದು ಪ್ರೌಢ ಶಾಲೆ ಹುಕ್ಕೇರಿ ಇಲ್ಲಿ 2023-24ನೇ ಸಾಲಿನ ಸ್ಕೌಟ್ಸ್ ಮತ್ತು ಗೈಡ್ಸ್ ಘಟಕಗಳ ನವೀಕರಣ ಸಭೆ, ಸ್ಕೌಟರ್ಸ್ ಮತ್ತು ಗೈಡರ್‌ಗಳ ಸಮಾವೇಶ ಜರುಗಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಜಿಲ್ಲಾ ಆಯುಕ್ತರು ಗೈಡ್ ಆದ ಶ್ರೀಮತಿ ಪ್ರಭಾವತಿ ಪಾಟೀಲ್ ಇವರು ವಹಿಸಿದ್ದರು. ಕ್ಷೇತ್ರ ಶಿಕ್ಷಣಾಧಿಕಾರಿಗಳು ಮಾತನಾಡಿ ಶಾಲೆಯಲ್ಲಿ ಪಾಲಕರ ಸಭೆ ನಡೆಸಿ ವಿಷಯವನ್ನು ತಿಳಿಸಿ ಘಟಕಕ್ಕೆ ಹೆಚ್ಚು ಮಕ್ಕಳು ಸೇರುವಂತೆ ಆಗಬೇಕೆಂದು ಶಿಕ್ಷಕರುಗಳಿಗೆ ಕರೆ ನೀಡಿದರು. ತಾಲ್ಲೂಕಿನ ಸ್ಕೌಟ್ಸ್ ಮತ್ತು ಗೈಡ್ ಮಕ್ಕಳಿಂದ ಸಮುದಾಯ ಸೇವಾ ಶಿಬಿರವನ್ನು, ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳ ಸಮಾವೇಶವನ್ನು ಆಯೋಜಿಸುವ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ದೈಹಿಕ ಶಿಕ್ಷಣ ಪರಿವೀಕ್ಷಕರಾದ ಶ್ರೀ ಆರ್.ಎಂ. ಶೆಟ್ಟಿಮನಿ, ಕಾರ್ಯದರ್ಶಿ ಶ್ರೀ ಎ.ಐ. ಕೋಟಿವಾಲೆ, ಶ್ರೀ ಡಿ.ಬಿ. ಅತ್ತಾರ ಉಪಸ್ಥಿತರಿದ್ದರು. 60ಕ್ಕೂ ಹೆಚ್ಚು ಸ್ಕೌಟರ್ ಮತ್ತು ಗೈಡರ್‌ಗಳು ಭಾಗವಹಿಸಿದ್ದರು.



## ಬಳ್ಳಾರಿ

ಹುತಾತ್ಮ ಕ್ಯಾಪ್ಟನ್ ಎಮ್.ವಿ. ಪ್ರಾಂಜಲ್‌ರವರ ಆತ್ಮ ಶಾಂತಿಗಾಗಿ ನವೆಂಬರ್ 29 ರಂದು ಬಳ್ಳಾರಿ ಜಿಲ್ಲಾ ಸಂಸ್ಥೆ ಇವರಿಂದ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ಶ್ರೀಮತಿ ಸರಳಾದೇವಿ ಸತೀಶ್ಚಂದ್ರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಶ್ರೀ ರಾಮಾಂಜನೇಯುಲು, ರೋವರ್ ಲೀಡರ್, ಶ್ರೀ ನಾಗರಾಜ ಎಮ್., ಡಿ.ಟಿ.ಸಿ.(ಸ್ಕೌ), ಶ್ರೀ ಎಮ್. ಭಾಷಾ, ಜಿಲ್ಲಾ ಸಂಘಟಕರು, ಉಪನ್ಯಾಸಕರು-ಉಪನ್ಯಾಸಕಿಯರು ಹಾಗೂ ರೋವರ್ಸ್-ರೇಂಜರ್ಸ್ ಮಕ್ಕಳು ಉಪಸ್ಥಿತರಿದ್ದರು. ನಂತರ ಬೆಳಿಗ್ಗೆ 09:00ಗೆ ಮೇಧಾ ಪದವಿ ಕಾಲೇಜಿನಲ್ಲಿ ಹುತಾತ್ಮ ಕ್ಯಾಪ್ಟನ್ ಎಮ್.ವಿ. ಪ್ರಾಂಜಲ್‌ರವರ ಆತ್ಮ ಶಾಂತಿಗಾಗಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಜಿಲ್ಲಾ ಸಂಸ್ಥೆ ಬಳ್ಳಾರಿ ಇವರಿಂದ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.




* ಹುತಾತ್ಮ ಕ್ಯಾಪ್ಟನ್ ಎಮ್.ವಿ. ಪ್ರಾಂಜಲ್‌ರವರ ಆತ್ಮ ಶಾಂತಿಗಾಗಿ ನವೆಂಬರ್ 29 ರಂದು ಜಿಲ್ಲಾ ಸಂಸ್ಥೆ ಬಳ್ಳಾರಿ ಇವರಿಂದ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ಆಚರಿಸಲಾಯಿತು. ಶ್ರೀಮತಿ ಮಲ್ಲೇಶ್ವರಿ ಜುಜಾರೆ, ಎ.ಎಸ್.ಓ.ಸಿ.(ಗೈ), ಶ್ರೀ ನಾಗರಾಜ ಎಮ್., ಡಿ.ಟಿ.ಸಿ.(ಸ್ಕೌ), ಶ್ರೀಮತಿ ಜಯಶ್ರೀ ಜೋಷಿ, ಎಲ್.ಟಿ.(ಗೈ) ಮತ್ತು ಡಿ.ಟಿ.ಸಿ.(ಗೈ) ಉಪಸ್ಥಿತರಿದ್ದರು.

* ಹುತಾತ್ಮ ಕ್ಯಾಪ್ಟನ್ ಎಮ್.ವಿ. ಪ್ರಾಂಜಲ್‌ರವರ ಆತ್ಮ ಶಾಂತಿಗಾಗಿ ನವೆಂಬರ್ 29 ರಂದು ಜಿಲ್ಲಾ ಸಂಸ್ಥೆ ಬಳ್ಳಾರಿ ಇವರಿಂದ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ಜಿಂದಾಲ್ ಆದರ್ಶ ವಿದ್ಯಾಲಯ ಸಂಡೂರಿನಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಪ್ರಾಂಶುಪಾಲರಾದ ಶ್ರೀ ಪ್ರಶಾಂತ್ ಮೂಲೆ, ಸ್ಕೌಟ್ ಮಾಸ್ಟರ್-ಗೈಡ್ ಕ್ಯಾಪ್ಟನ್ ಹಾಗೂ ಶಿಕ್ಷಕರು-ಶಿಕ್ಷಕಿಯರು ಮತ್ತು ಮಕ್ಕಳು ಉಪಸ್ಥಿತರಿದ್ದರು.



* ಹುತಾತ್ಮ ಕ್ಯಾಪ್ಟನ್ ಎಮ್.ವಿ. ಪ್ರಾಂಜಲ್‌ರವರ ಆತ್ಮ ಶಾಂತಿಗಾಗಿ ನವೆಂಬರ್ 29 ರಂದು ಜಿಲ್ಲಾ ಸಂಸ್ಥೆ ಬಳ್ಳಾರಿ ಇವರಿಂದ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕೃಷ್ಣಾ ನಗರ, ಸಂಡೂರು ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಪ್ರಾಂಶುಪಾಲರಾದ ಶ್ರೀ ಪ್ರಶಾಂತ್ ಮೂಲೆ, ಸ್ಕೌಟ್ ಮಾಸ್ಟರ್–ಗೈಡ್ ಕ್ಯಾಪ್ಟನ್ ಹಾಗೂ ಶಿಕ್ಷಕರು–ಶಿಕ್ಷಕಿಯರು ಮತ್ತು ಮಕ್ಕಳು ಉಪಸ್ಥಿತರಿದ್ದರು.

* ಡಿಸೆಂಬರ್ 12 ರಂದು ಸಂಡೂರಲ್ಲಿ ಎಸ್.ಸಿ.ಎಸ್. ಹಿರಿಯ ಪ್ರಾಥಮಿಕ ಮತ್ತು ಪ್ರೌಢ ಶಾಲೆಯಲ್ಲಿ ಹೊಸ ಸ್ಕೌಟ್ ಮತ್ತು ಗೈಡ್ ಘಟಕವನ್ನು ಪ್ರಾರಂಭಿಸಲಾಯಿತು. ಈ ಕಾರ್ಯಕ್ರಮದಲ್ಲಿ ಮುಖ್ಯ ಗುರುಗಳು, ಪ್ರೌಢ ಶಾಲೆಯ ಮುಖ್ಯಸ್ಥರು ಶ್ರೀಮತಿ ಶಶಿಕಲ, ಸಂಡೂರು ತಾಲೂಕಿನ ಕಾರ್ಯದರ್ಶಿಗಳು ಶ್ರೀ ಜಿ.ಎ.ಎಸ್. ಸೋಮಪ್ಪ, ಶ್ರೀಮತಿ ಮಲ್ಲೇಶ್ವರಿ ಜುಜಾರೆ, ಎ.ಎಸ್.ಓ.ಸಿ.(ಗೈ), ಶ್ರೀ ಎಮ್. ಭಾಷಾ, ಜಿಲ್ಲಾ ಸಂಘಟಕರು, ಸ್ಥಳೀಯ ಸಂಸ್ಥೆ ಖಜಾಂಚಿ ಶ್ರೀ ಮೊಹಮ್ಮದ್ ಜಾವಿದ್ ಮತ್ತು ಸ್ಕೌಟ್–ಗೈಡ್ ಮಕ್ಕಳು ಉಪಸ್ಥಿತರಿದ್ದರು.



* ಡಿಸೆಂಬರ್ 12 ರಂದು ಸಂಡೂರಲ್ಲಿ ಕೃಪಾನಿಲಯ ಪ್ರಾಥಮಿಕ ಮತ್ತು ಪ್ರೌಢ ಶಾಲೆಯಲ್ಲಿ ಹೊಸ ಕಬ್–ಬುಲ್‌ಬುಲ್ ಮತ್ತು ಸ್ಕೌಟ್–ಗೈಡ್ ಘಟಕವನ್ನು ಪ್ರಾರಂಭಿಸಲಾಯಿತು. ಈ ಕಾರ್ಯಕ್ರಮದಲ್ಲಿ ಪ್ರೌಢ ಶಾಲೆಯ ಮುಖ್ಯಸ್ಥರು ಶ್ರೀಮತಿ ಸಿಸ್ಟರ್ ಶರ್ಲಿ, ಶ್ರೀಮತಿ ಮಲ್ಲೇಶ್ವರಿ ಜುಜಾರೆ, ಎ.ಎಸ್.ಓ.ಸಿ.(ಗೈ), ಸಂಡೂರು ತಾಲೂಕಿನ ಕಾರ್ಯದರ್ಶಿಗಳು ಶ್ರೀ ಜಿ.ಎ.ಎಸ್. ಸೋಮಪ್ಪ ಶ್ರೀ ಎಮ್. ಭಾಷಾ, ಜಿಲ್ಲಾ ಸಂಘಟಕರು, ಸ್ಥಳೀಯ ಸಂಸ್ಥೆ ಖಜಾಂಚಿ ಶ್ರೀ ಮೊಹಮ್ಮದ್ ಜಾವಿದ್ ಹಾಗೂ ಸ್ಕೌಟ್ ಮಾಸ್ಟರ್–ಗೈಡ್ ಕ್ಯಾಪ್ಟನ್ ಉಪಸ್ಥಿತರಿದ್ದರು.

* ಸರಕಾರ ಪ್ರೌಢಶಾಲೆ ಕೆ. ಬೆಳಗಲ್ ತಾಲ್ಲೂಕು ಸಿರುಗುಪ್ಪದ ಸ್ಕೌಟ್ಸ್–ಗೈಡ್ಸ್‌ಗಳು ಹಾಗು ಸ್ಕೌಟ್ ಶಿಕ್ಷಕರಾದ ಶ್ರೀ ನಟರಾಜಸ್ವಾಮಿ, ಕಾರ್ಯದರ್ಶಿಗಳು ಸ್ಥಳೀಯ ಸಂಸ್ಥೆ ಸಿರುಗುಪ್ಪ ಇಲ್ಲಿ ಕನಕದಾಸರ



ಜಯಂತಿಯನ್ನು ಆಚರಿಸಿದರು. ಶಾಂತಿ ನಿಕೇತನ ವಿದ್ಯಾಮಂದಿರ ಶಾಲೆ ಸಿರುಗುಪ್ಪ ಭಾರತ್ ಸ್ಕೌಟ್–ಗೈಡ್ಸ್ ಮಕ್ಕಳು ಹಾಗೂ ಸ್ಕೌಟ್ಸ್–ಗೈಡ್ಸ್ ಶಿಕ್ಷಕರು ಹಾಗೂ ಶಿಕ್ಷಕಿಯರು ಕನಕದಾಸರ ಜಯಂತಿಯನ್ನು ಆಚರಿಸಿದರು.

* ನವೆಂಬರ್ 22 ರಂದು ಜಮ್ಮು–ಕಾಶ್ಮೀರದ ರಾಜೋರಿಯಲ್ಲಿ ಉಗ್ರರೊಂದಿಗೆ ನಡೆದ ಗುಂಡಿನ ದಾಳಿಗೆ ಬಲಿಯಾದ 63 ರೈಫಲ್ ತಂಡದ ಕ್ಯಾಪ್ಟನ್ ಎಂ.ವಿ. ಪ್ರಾಂಜಲ್‌ರವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

## ಬೆಂಗಳೂರು ಉತ್ತರ

ಡಿಸೆಂಬರ್ 19 ಮತ್ತು 20ರಂದು ಜಿಲ್ಲೆ ವತಿಯಿಂದ ಜಿಲ್ಲಾ ಮಟ್ಟದ ಕಬ್–ಬುಲ್ ಬುಲ್ ಉತ್ಸವ ರಾಮಯ್ಯ ವಿದ್ಯಾ ನಿಕೇತನ್ ಅಬ್ಬಿಕೆರೆ ಇಲ್ಲಿ ನಡೆಯಿತು. ಕಾರ್ಯಕ್ರಮವು ಧ್ವಜ ವಂದನೆಯೊಂದಿಗೆ ಪ್ರಾರಂಭವಾಯಿತು. ರಾಮಯ್ಯ ವಿದ್ಯಾ ನಿಕೇತನ ಶಾಲೆಯ ಮುಖ್ಯ ಆಡಳಿತಾಧಿಕಾರಿಯಾದ ಶ್ರೀ ರಾಮಪ್ರಸಾದ್, ಐ.ಎ.ಎಸ್ ಇವರು ಕಬ್–ಬುಲ್‌ಬುಲ್ ಉತ್ಸವ ಉದ್ಘಾಟಿಸಿ ಮಕ್ಕಳಿಗೆ ಶುಭಾಶಯ ಕೋರಿದರು. ಅದೇ ರೀತಿ ಶ್ರೀ ರಾಮಚಂದ್ರ, ಮುಖ್ಯ ಹಣಕಾಸು ಅಧಿಕಾರಿಗಳು. ಕಬ್–ಬುಲ್‌ಬುಲ್‌ಗಳಿಗೆ ಶಿಬಿರದ ಸ್ಮರಣಿಕೆಯಾದ ಬ್ಯಾಗ್‌ಗಳನ್ನು ನೀಡಿ ಸಂತಸ ವ್ಯಕ್ತಪಡಿಸಿದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಬಿ.ಕೆ. ಶೇಷಾದ್ರಿ ಎಲ್ಲರನ್ನೂ ಸ್ವಾಗತಿಸಿದರು. ಕಾರ್ಯಕ್ರಮಕ್ಕೆ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಪ್ರಸನ್ನಕುಮಾರ್ ಆಗಮಿಸಿ ಮಕ್ಕಳಿಗೆ ಶುಭಾಶಯ ಕೋರಿದರು. ಶಾಲಾ ಪ್ರಾಂಶುಪಾಲರದ ಶ್ರೀಮತಿ ಶಾಂತಿ ಇವರು ಕಬ್–ಬುಲ್‌ಬುಲ್ ಉತ್ಸವದ ಶಿಬಿರಕ್ಕೆ ಬೇಕಾದ ಎಲ್ಲಾ ರೀತಿಯ ಸಹಕಾರವನ್ನು ನೀಡಿದರು.



* ನವೆಂಬರ್ 25 ಮತ್ತು 26 ರಂದು ಬೆಂಗಳೂರಿನಲ್ಲಿ ನಡೆದ 'ಬೆಂಗಳೂರು ಕಂಬಳ–ನಮ್ಮ ಕಂಬಳ' ಕಾರ್ಯಕ್ರಮ ನಡೆಯಿತು, ರಾಜ್ಯ ಸಂಸ್ಥೆ ಸುತ್ತೋಲೆಯಂತೆ ಸೇವಾ ಶಿಬಿರವನ್ನು ಆಯೋಜಿಸಲಾಯಿತು. ಶಿಬಿರದಲ್ಲಿ 75 ರೋವರ್ಸ್–ರೇಂಜರ್ಸ್ ಸೇವೆಯನ್ನು ನೀಡಿದರು. ಸ್ಕೌಟ್ಸ್ ಮಾಸ್ಟರ್ ಶ್ರೀ ಸುಭಾಷ್ ಇವರು ಶಿಬಿರದಲ್ಲಿ ಸಹಕರಿಸಿದರು.

* ನವೆಂಬರ್ 22 ರಂದು ಕಾಶ್ಮೀರದ ಜೋರಿ ಜಿಲ್ಲೆಯಲ್ಲಿ ರಾಷ್ಟ್ರ ರಕ್ಷಣೆಯ ಕಾರ್ಯದ ಸಂದರ್ಭದಲ್ಲಿ ಉಗ್ರರ ದಾಳಿಯಲ್ಲಿ, ಭಾರತ ಮಾತೆಯ ಹೆಮ್ಮೆಯ ಪುತ್ರ, ವೀರಯೋಧ 63ನೇ ರಾಷ್ಟ್ರೀಯ ರೈಫಲ್ ಕ್ಯಾ.ಎಂ.ವಿ. ಪ್ರಾಂಜಲ್, ರಾಷ್ಟ್ರಪತಿ ಸ್ಕೌಟ್ಸ್ ಇವರಿಗೆ ಬೆಂಗಳೂರು ಉತ್ತರ ಜಿಲ್ಲೆಯಾದ್ಯಂತ ನಮನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.



* ಬೆಂಗಳೂರು ಉತ್ತರ ಜಿಲ್ಲೆ ವತಿಯಿಂದ “ಸ್ಕೌಟ್ಸ್–ಗೈಡ್ಸ್ ನಡಿಗೆ ಹಳ್ಳಿ ಕಡೆಗೆ” ಎಂಬ ಸಮುದಾಯ ಸೇವಾ ಕಾರ್ಯಕ್ರಮ ದಡಿಯಲ್ಲಿ 17ನೇ ತಿಂಗಳ ಕಾರ್ಯಕ್ರಮವು ನವೆಂಬರ್ 29 ರಂದು ಗಂಟಿಗಾನಹಳ್ಳಿಯಲ್ಲಿ ಯಲಹಂಕ ಬೆಂಗಳೂರು ಇಲ್ಲಿ ಸಮುದಾಯ ಸೇವೆ ಮಾಡಲಾಯಿತು. ಗಂಟಿಗಾನಹಳ್ಳಿಯ ನದಿಯ ದಂಡೆಯಲ್ಲಿ ಶೇಖರಣೆಗೊಂಡ ಪ್ಲಾಸ್ಟಿಕ್ ತ್ಯಾಜ್ಯವನ್ನು ತೆಗೆದು ಸ್ವಚ್ಛಗೊಳಿಸಲಾಯಿತು. ಗಂಟಿಗಾನಹಳ್ಳಿಯ ರಸ್ತೆಯಲ್ಲಿರುವ ಸರ್ಕಲ್‌ನ್ನು ಸ್ವಚ್ಛತೆ ಮಾಡಲಾಯಿತು. ಹಾಗೂ ಪಿ.ಡಿ.ಓ.ರವರು ತಮ್ಮ ಸಹಕಾರ ನೀಡಿದರು ಬೆಂಗಳೂರು ಉತ್ತರ ಜಿಲ್ಲೆಯ ವಿವಿಧ ವಿವಿಧ ಕಾಲೇಜುಗಳಿಂದ 15 ರೋವರ್ಸ್–ರೇಂಜರ್ಸ್ ಭಾಗವಹಿಸಿದ್ದರು.



* ಡಿಸೆಂಬರ್ 02 ರಿಂದ 06ರ ವರೆಗೆ ಕೋಲ್ಕತ್ತದ ಗಂಗಾನಗರ ಇಲ್ಲಿ ನಡೆದ ರಾಷ್ಟ್ರಮಟ್ಟದ ಕಬ್, ಬುಲ್ ಬುಲ್ ಕ್ಯಾಂಪೂರಿ ಶಿಬಿರದಲ್ಲಿ ಬೆಂಗಳೂರು ಉತ್ತರ ಜಿಲ್ಲೆಯಿಂದ ಶ್ರದ್ದಾಂಜಲಿ ಸಂಯೋಜಿತ ಪ್ರಾಥಮಿಕ ಶಾಲೆ (ದಿವ್ಯಾಂಗ) ಹಾಗೂ ಶಿವಾಜಿನಗರ ಶಾಲೆಯಿಂದ 6 ಕಬ್, 6 ಬುಲ್‌ಬುಲ್ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಬುಲ್‌ಬುಲ್ ಶಿಕ್ಷಕಿಯಾದ ಶ್ರೀಮತಿ ರಾಧಮಣಿ ಇವರು ಶಿಬಿರದ ನೇತೃತ್ವ ವಹಿಸಿದರು ಹಾಗೂ ಚಾಮುಂಡಿ ಮುಕ್ತದಳದಿಂದ 6 ಕಬ್ ಹಾಗೂ ಶ್ರೀ ವೆಂಕಟೇಶ್, ಕಬ್ ಮಾಸ್ಟರ್ ಭಾಗವಹಿಸಿ ಶಿಬಿರ ಯಶಸ್ವಿಗೊಳಿಸಿದರು.



## ಚಿಕ್ಕಬಳ್ಳಾಪುರ

ಚಿಕ್ಕಬಳ್ಳಾಪುರ ಜಿಲ್ಲಾ ಸಂಸ್ಥೆ ವತಿಯಿಂದ ನವೆಂಬರ್ 17 ರಂದು ಶಿಕ್ಷಣ ಇಲಾಖೆಯ ಎಲ್ಲಾ ಅಧಿಕಾರಿಗಳು ಮತ್ತು ಕ್ಷೇತ್ರ ಸಿಬ್ಬಂದಿಗಳಿಗೆ ಏರ್ಪಡಿಸಿದ್ದ ಒಂದು ದಿನದ ಮಾಹಿತಿ ಶಿಬಿರದಲ್ಲಿ ಉಪ ನಿರ್ದೇಶಕರು ಹಾಗೂ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಬೈಲಾಂಜನಪ್ಪ, ಡಯಟ್ ಪ್ರಾಂಶುಪಾಲರು ಹಾಗೂ ಜಿಲ್ಲಾ ಸ್ಕೌಟ್ಸ್ ಆಯುಕ್ತರಾದ ಶ್ರೀ ಮುನಿಕೆಂಪೇಗೌಡ, ರಾಜ್ಯ ಕಾರ್ಯದರ್ಶಿಗಳಾದ ಶ್ರೀ ಗಂಗಪ್ಪಗೌಡ, ರಾಜ್ಯ ಗೈಡ್ ವಿಭಾಗ ತರಬೇತಿ ಆಯುಕ್ತರಾದ ಶ್ರೀಮತಿ ಶ್ಯಾಮಲಾರವರು, ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಸಿ.ಬಿ. ಪ್ರಕಾಶ್, ಸಹಕಾರ್ಯದರ್ಶಿ ಶ್ರೀ ಸಿದ್ದೇಶಪ್ಪ ಜೊತೆ ಕಾರ್ಯದರ್ಶಿ ಶ್ರೀಮತಿ ಉಮಾ 145 ಇಲಾಖಾ ಅಧಿಕಾರಿಗಳು, ಕ್ಷೇತ್ರ ಸಿಬ್ಬಂದಿ ಮತ್ತು ಜಿಲ್ಲೆ ಮತ್ತು ತಾಲ್ಲೂಕು ಸಂಸ್ಥೆಯ ಪದಾಧಿಕಾರಿಗಳು ಹಾಜರಿದ್ದರು.



## ಚಿಕ್ಕಮಗಳೂರು

ಡಿಸೆಂಬರ್ 05 ರಂದು ನಡೆದ ಜಿಲ್ಲಾ ಮಟ್ಟದ ಮೂಲ ತರಬೇತಿಯ ಉದ್ಘಾಟನೆಯನ್ನು ಮಾನ್ಯ ಜಿಲ್ಲಾಧಿಕಾರಿಗಳಾದ ಡಾ. ಮೀನನಾಗರಾಜ್ ರವರು ನೆರವೇರಿಸಿ ಶಿಬಿರಾರ್ಥಿಗಳಿಗೆ ಶುಭ ಹಾರೈಸಿದರು. ಅದೇ ಸಂದರ್ಭದಲ್ಲಿ ರಾಜ್ಯ ಸಂಸ್ಥೆಯ ಉಪಾಧ್ಯಕ್ಷರು ಹಾಗೂ ಜಿಲ್ಲಾ ಆಯುಕ್ತರಾದ ಶ್ರೀ ಎ.ಎನ್. ಮಹೇಶ್, ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಎಂ.ಎನ್. ಷಡಕ್ಷರಿ, ಜಿಲ್ಲಾ ತರಬೇತಿ ಆಯುಕ್ತರಾದ ಶ್ರೀಮತಿ ಸಂಧ್ಯಾರಾಣಿ, ಜಿಲ್ಲಾ ಆಯುಕ್ತರು ಗೈಡ್ಸ್ ಶ್ರೀಮತಿ ಎಸ್. ಮಮತ, ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಟಿ.ಕೆ. ಫಣಿರಾಜ್ ಹಾಗೂ ತರಬೇತುದಾರರಾದ ಡಾಕ್ಟರ್ ಶ್ರೀಮತಿ ಇಂಚರ ನಾರಾಯಣಸ್ವಾಮಿ, ಶ್ರೀಮತಿ ಮಮತರವರು ಸಂಘಟನಾ ಆಯುಕ್ತರಾದ ಶ್ರೀ ಬಿ.ಎನ್. ಕಿರಣ್ ಕುಮಾರ್ ಉಪಸ್ಥಿತರಿದ್ದರು.

ಇದರ ಸಮಾರೋಪ ಸಮಾರಂಭದಲ್ಲಿ ಮಾನ್ಯ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾರವರು ಶಿಬಿರಾರ್ಥಿಗಳಿಗೆ ಶುಭ





ಹಾರೈಸಿದರು ಹಾಗೂ ಶಾಲೆಯಲ್ಲಿ ಘಟಕಗಳನ್ನು ಪ್ರಾರಂಭಿಸುವ ಬಗ್ಗೆ ತಿಳಿಸಿದರು. ಅದೇ ಸಂದರ್ಭದಲ್ಲಿ ರಾಜ್ಯ ಸಂಸ್ಥೆಯ ಉಪಾಧ್ಯಕ್ಷರು ಹಾಗೂ ಜಿಲ್ಲಾ ಆಯುಕ್ತರು ಸ್ಕೌಟ್ಸ್ ಶ್ರೀ ಎ.ಎನ್. ಮಹೇಶ್, ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಎಂ.ಎನ್. ಷಡಕ್ಷರಿ, ಕ್ಷೇತ್ರ, ಶಿಕ್ಷಣಾಧಿಕಾರಿಗಳಾದ ಶ್ರೀ ರವೀಶ್ ಹಾಗೂ ತರಬೇತುದಾರರಾದ ಡಾ. ಇಂಚರ ನಾರಾಯಣಸ್ವಾಮಿ, ಶ್ರೀಮತಿ ಬಿ.ಎಲ್. ಮಮತಾ ಉಪಸ್ಥಿತರಿದ್ದರು.

* ಡಿಸೆಂಬರ್ 15 ರಂದು ಬಿ.ಜಿ.ಎಸ್. ಶಾಲೆಯಲ್ಲಿ ನಡೆದ ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಗೆ ಫುಡ್‌ಫೆಸ್ಟ್ ಎಂಬ ಕಾರ್ಯಕ್ರಮವನ್ನು ಆಚರಿಸಲಾಗಿತ್ತು. ಇದರ ಉದ್ಘಾಟನೆಯನ್ನು ಮೂಡಿಗೆರೆ ತಾಲ್ಲೂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಡಾ. ರಮೇಶ್ ಈ ಕಾರ್ಯಕ್ರಮವನ್ನು ಉದ್ಘಾಟಿಸಿ ಶುಭ ಹಾರೈಸಿದರು ಹಾಗೂ ಶಾಲಾ ಮುಖ್ಯೋಪಾಧ್ಯಾಯರಾದ ಡಾ. ಚಂದ್ರಶೇಖರ್ ಮಕ್ಕಳಿಗೆ ಶುಭ ಹಾರೈಸಿದರು. ಅದೇ ಸಂದರ್ಭದಲ್ಲಿ ಲೇಡಿ ಸ್ಕೌಟ್ ಮಾಸ್ಟರ್ ಶ್ರೀಮತಿ ಗೀತಾ ಟಿ.ಆರ್. ಹಾಗೂ ಗೈಡ್ಸ್ ಕ್ಯಾಪ್ಟನ್ ಶ್ರೀಮತಿ ಪಲ್ಲವಿ ಗಿರೀಶ್‌ರವರು ಉಪಸ್ಥಿರದರು.



* ಡಿಸೆಂಬರ್ 16 ರಂದು ಸರ್ವೋದಯ ಶಾಲೆಯಲ್ಲಿ ದೀಕ್ಷಾ ಸಮಾರಂಭವನ್ನು ಸ್ಕೌಟ್ಸ್-ಗೈಡ್ಸ್‌ಗಳಿಗೆ ಹಮ್ಮಿಕೊಳ್ಳಲಾಗಿತ್ತು. ಈ ಸಮಾರಂಭದಲ್ಲಿ ಜಿಲ್ಲಾ ಸಂಸ್ಥೆಯಿಂದ ಜಿಲ್ಲಾ ಸಹ ಕಾರ್ಯದರ್ಶಿಗಳಾದ ಶ್ರೀ ನೀಲಕಂಠ ಆಚಾರ್ ಹಾಗೂ ಶ್ರೀಮತಿ ನಾಜಿಯಾ ಸಲ್ಮರವರು ಸ್ಕೌಟ್ ಮತ್ತು ಗೈಡ್ ಮಕ್ಕಳಿಗೆ ದೀಕ್ಷೆಯನ್ನು ನೀಡಿದರು.




## ದಕ್ಷಿಣ ಕನ್ನಡ

ನವೆಂಬರ್ 24 ರಿಂದ 30ರ ವರೆಗೆ ಅಂಡಮಾನ್ ನಿಕೋಬಾರ್ ದ್ವೀಪದಲ್ಲಿ ನಡೆದ ಸ್ಕೌಟರ್-ಗೈಡರ್‌ಗಳ ಮುಂದುವರಿದ ತರಬೇತಿ ಶಿಬಿರದಲ್ಲಿ ಗೈಡ್ ವಿಭಾಗದಲ್ಲಿ ನಾಯಕಿಯಾಗಿ ದಕ್ಷಿಣ ಕನ್ನಡ ಜಿಲ್ಲೆಯ ಸರಕಾರಿ ಪ್ರೌಢಶಾಲೆ ಕಿನ್ನಿಕಂಬಳ ಮಂಗಳೂರಿನ ಗೈಡ್ ಕ್ಯಾಪ್ಟನ್ ಹಾಗೂ ಜಿಲ್ಲಾ ತರಬೇತಿ ಆಯುಕ್ತೆ ಶ್ರೀಮತಿ ಜಯಶ್ರೀ, ಎಲ್.ಟಿ.(ಗೈ) ಹಾಗೂ ಬುಲ್‌ಬುಲ್ ವಿಭಾಗದ ನಾಯಕಿಯಾಗಿ ಸೈಂಟ್ ಅಂತೋನಿ ಹಿರಿಯ ಪ್ರಾಥಮಿಕ ಶಾಲೆ ಅಮ್ಟೂರು, ಬಂಟ್ವಾಳದ ಫ್ಲಾಕ್ ಲೀಡರ್ ಸಿಸ್ಟರ್ ಲೊರಿನ್ ಎಲ್.ಟಿ.(ಫ್ಲಾ) ಇವರು ಭಾಗವಹಿಸಿದ್ದರು.

* ಡಿಸೆಂಬರ್ 27 ರಂದು ವಿವೇಕಾನಂದ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯ (ಸ್ವಾಯತ್ತ) ನೆಹರೂ ನಗರ, ಪುತ್ತೂರು ಇಲ್ಲಿ ರೋವರ್ಸ್ ಮತ್ತು ರೇಂಜರ್ಸ್ ಘಟಕ ಹಾಗೂ ಇತರ ಸಂಸ್ಥೆಯ ವತಿಯಿಂದ ನಡೆದ ರಕ್ತದಾನ ಶಿಬಿರದಲ್ಲಿ ವಿವೇಕಾನಂದ ಕಾಲೇಜಿನ ರೋವರ್ಸ್ ಮತ್ತು ರೇಂಜರ್ಸ್ ವಿದ್ಯಾರ್ಥಿಗಳು ರಕ್ತದಾನ ಮಾಡಿದರು.



* ವಿಠ್ಠಲ ಜೇಸಿಸ್ ಆಂಗ್ಲ ಮಾಧ್ಯಮ ಶಾಲೆ ವಿಟ್ಲದ ಸ್ಕೌಟ್ಸ್ ಮತ್ತು ಗೈಡ್ಸ್ ದಳದ ವತಿಯಿಂದ ವೀರಯೋಧ ರಾಷ್ಟ್ರಪತಿ ಸ್ಕೌಟ್ ಕ್ಯಾಪ್ಟನ್ ಎಂ.ವಿ ಪ್ರಾಂಜಲ್‌ಗೆ ನುಡಿ ನಮನ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಹಾಗೂ ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು, ಸಂಸ್ಥೆಯ ಮುಖ್ಯಸ್ಥರು, ಆಡಳಿತಾಧಿಕಾರಿಗಳು, ಸ್ಕೌಟರ್-ಗೈಡರ್ ಹಾಗೂ ಸಂಸ್ಥೆಯ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



* ಪಂಜ ಸ್ಥಳೀಯ ಸಂಸ್ಥೆ, ಶಾಲಾ ಶಿಕ್ಷಣ ಇಲಾಖೆ ಮತ್ತು ಶ್ರೀ ಸುಬ್ರಹ್ಮಣ್ಯೇಶ್ವರ ಪದವಿ ಪೂರ್ವ ಕಾಲೇಜು ಸುಬ್ರಹ್ಮಣ್ಯ ಇವುಗಳ ಸಹಯೋಗದಲ್ಲಿ ನವೆಂಬರ್ 24 ಮತ್ತು 25 ರಂದು ಸ್ಕೌಟ್, ಗೈಡ್, ಕಬ್, ಬುಲ್‌ಬುಲ್ ಹಾಗೂ ರೋವರ್-ರೇಂಜರ್ ವಾರ್ಷಿಕ ಮೇಳವನ್ನು ಶ್ರೀ ಸುಬ್ರಹ್ಮಣ್ಯೇಶ್ವರ ಪದವಿ ಪೂರ್ವ ಕಾಲೇಜು ಸುಬ್ರಹ್ಮಣ್ಯ



ಇಲ್ಲಿ ಆಯೋಜಿಸಲಾಯಿತು. ಸುಬ್ರಹ್ಮಣ್ಯ ಗ್ರಾಮ ಪಂಚಾಯತ್ ಅಧ್ಯಕ್ಷೆ ಶ್ರೀಮತಿ ಸುಜಾತ ಕಲ್ಲಾಜೆ ಇವರ ಅಧ್ಯಕ್ಷತೆಯಲ್ಲಿ ನಡೆದ ಉದ್ಘಾಟನಾ ಕಾರ್ಯಕ್ರಮದಲ್ಲಿ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷರಾದ ಶ್ರೀ ನಿತ್ಯಾನಂದ ಮುಂಡೋಡಿ ಉದ್ಘಾಟಿಸಿದರು. ಅಭ್ಯಾಗತರಾಗಿ ಸುಳ್ಯ ಕ್ಷೇತ್ರ ಸಂಪನ್ಮೂಲ ಕೇಂದ್ರದ ಸಮನ್ವಯಾಧಿಕಾರಿ ಶ್ರೀಮತಿ ಶೀತಲ್, ಸ್ಕೌಟ್–ಗೈಡ್ಸ್‌ಜಿಲ್ಲಾ ನೋಡಲ್ ಅಧಿಕಾರಿ ಡಯಟ್ ಉಪನ್ಯಾಸಕರಾದ ಶ್ರೀ ಪೀತಾಂಬರ ಕೆ., ಕುಕ್ಕೆ ಶ್ರೀ ಮಹಾವಿದ್ಯಾಲಯದ ನಿವೃತ್ತ ಪ್ರಾಂಶುಪಾಲರಾದ ಶ್ರೀ ರಂಗಯ್ಯ ಶೆಟ್ಟಿಗಾರ್, ನಾಯಕ ತರಬೇತುದಾರ ಶ್ರೀ ಗುರುಮೂರ್ತಿ ನಾಯ್ಕಾಪು, ಸ್ಕೌಟ್–ಗೈಡ್‌ರಾಜ್ಯ ಸಹಾಯಕ ಸಂಘಟನಾ ಆಯುಕ್ತರಾದ ಶ್ರೀ ಭರತ್ ರಾಜ್ ಕೆ. ಭಾಗವಹಿಸಿ ಶುಭ ಹಾರೈಸಿದರು. ಎಸ್.ಎಸ್.ಪಿ.ಯು. ಕಾಲೇಜು ರಕ್ಷಕ ಶಿಕ್ಷಕ ಸಮಿತಿಯ ಅಧ್ಯಕ್ಷರಾದ ಶ್ರೀ ದಿನೇಶ್ ಶಿರಾಡಿ, ಸ್ಕೌಟ್–ಗೈಡ್ ಜಿಲ್ಲಾ ಉಪಾಧ್ಯಕ್ಷೆ ಶ್ರೀಮತಿ ವಿಮಲಾ ರಂಗಯ್ಯ, ಸ್ಥಳೀಯ ಸಂಸ್ಥೆಯ ಉಪಾಧ್ಯಕ್ಷ ಮೇಳದ ಸಂಯೋಜಕ ಶ್ರೀ ಪ್ರವೀಣ್ ಮುಂಡೋಡಿ, ಉಪಾಧ್ಯಕ್ಷರಾದ ಶ್ರೀ ಬಾಲಕೃಷ್ಣ ಹೇಮಳ, ಶ್ರೀ ಸೋಮಶೇಖರ ನೇರಳ, ಶ್ರೀ ಬಾಲಕೃಷ್ಣ ರೈ ಬಿರ್ಕಿ ಉಪಸ್ಥಿತರಿದ್ದರು. ಎಸ್.ಎಸ್.ಪಿ.ಯು. ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಸೋಮಶೇಖರ್ ನಾಯಕ್ ಸ್ವಾಗತಿಸಿ, ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಮಾಧವ ಬಿ.ಕೆ. ವಂದಿಸಿದರು. ಈ ಉದ್ಘಾಟನಾ ಕಾರ್ಯಕ್ರಮವನ್ನು ಸ್ಕೌಟ್ ಶಿಕ್ಷಕಿ ಸುಜಯಶ್ರೀ ಮತ್ತು ಶಿಕ್ಷಕಿ ಶುಭಾ ನಿರೂಪಿಸಿದರು. ಇದೇ ಸಂದರ್ಭದಲ್ಲಿ ಜಿಲ್ಲಾ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕೃತ ಸ್ಥಳೀಯ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಶ್ರೀ ಉದಯಕುಮಾರ್ ರೈ. ಎಸ್. ಇವರನ್ನು ಸನ್ಮಾನಿಸಲಾಯಿತು. 262 ಸ್ಕೌಟ್ಸ್, 233 ಗೈಡ್ಸ್, 15 ಬುಲ್‌ಬುಲ್, 9 ಕಬ್ಸ್ ಹಾಗೂ 78 ರೋವರ್–ರೇಂಜರ್ಸ್ ಮತ್ತು 41 ಸ್ಕೌಟ್ಸ್–ಗೈಡ್ ಶಿಕ್ಷಕರು ಒಟ್ಟು 638 ಮಂದಿ ಭಾಗವಹಿಸಿದರು. ಸ್ಕೌಟ್ ಶಿಕ್ಷಕ ಸತೀಶ್, ಗೈಡ್ ಶಿಕ್ಷಕಿ ಸ್ಮಿತಾ ಹಾಗೂ ರೇಂಜರ್ ಲೀಡರ್ ಶ್ರೀ ಸವಿತಾ ಶಿಬಿರ ನಾಯಕರುಗಳಾಗಿ ಸಹಕರಿಸಿದರು.

## ಧಾರವಾಡ

ನವೆಂಬ್ 03 ರಂದು ಶ್ರೀ ಕಾಡಸಿದ್ದೇಶ್ವರ ಕಲಾ ಮಹಾ ವಿದ್ಯಾಲಯ ಹುಬ್ಬಳ್ಳಿ ಇಲ್ಲಿ ಪದವಿ ಕಾಲೇಜುಗಳ ಉಪನ್ಯಾಸಕರಿಗೆ ಮಾಹಿತಿ ಶಿಬಿರ ಏರ್ಪಡಿಸಲಾಗಿತ್ತು. ಶ್ರೀ ಗಜಾನನ ಮಣ್ಣಿಕೇರಿ ಜಂಟಿ ನಿರ್ದೇಶಕರು ಅಪರ ಆಯುಕ್ತರ ಕಾರ್ಯಾಲಯ ಧಾರವಾಡ ಮತ್ತು ಧಾರವಾಡ ವಿಭಾಗೀಯ ಉಪಾಧ್ಯಕ್ಷರು ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ಇವರು ಸಸಿಗೆ ನೀರು ಹಾಕುವ ಮೂಲಕ ಉದ್ಘಾಟನೆ ಮಾಡಿದರು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಶ್ರೀಮತಿ ಉಮಾ ನೇರಳೆ ಪ್ರಾಂಶುಪಾಲರು ಕಾಡಸಿದ್ದೇಶ್ವರ ಕಲಾ ಮಹಾ ವಿದ್ಯಾಲಯ ಹುಬ್ಬಳ್ಳಿ ಇವರು ಮಾತನಾಡಿದರು. ಅಧ್ಯಕ್ಷತೆಯನ್ನು ವಹಿಸಿದ ಶ್ರೀ ಪಿ.ಜಿ.ಆರ್. ಸಿಂಧ್ಯ ರಾಜ್ಯ ಮುಖ್ಯ ಆಯುಕ್ತರು ಮಾತನಾಡಿ "ಸ್ಕೌಟ್ಸ್ ಗೈಡ್ಸ್ ಮೊದಲು ಭಾರತದಲ್ಲಿ 1909ರಲ್ಲಿ ಪ್ರಾರಂಭವಾಯಿತು. ನಮ್ಮ ಕರ್ನಾಟಕದಲ್ಲಿ ಬಿಷಪ್ ಕಾಟನ್ ಸ್ಕೂಲ್‌ನಲ್ಲಿ ಮೊದಲು ಪ್ರಾರಂಭಿಸಲಾಯಿತು. ಇದರ ಏಳಿಗೆಗೆ ಕೃಷ್ಣದೇವರಾಜ ಒಡೆಯರು ಸಾಕಷ್ಟು ಸಹಾಯ ಮಾಡಿದರು. ಸ್ವತಃ ತಾವೇ ಬಾಲ್ಯದಲ್ಲಿ ಕಬ್ ಆಗಿ ಸೇರಿಕೊಂಡಿದ್ದರು. ಸ್ಕೌಟ್ಸ್ ಗೈಡ್ಸ್ ಸಂಸ್ಥೆಯು ಮಕ್ಕಳಲ್ಲಿ ಮಾನವೀಯ ಮೌಲ್ಯಗಳನ್ನು ತುಂಬುವ ಕೆಲಸ ಮಾಡುತ್ತಿದ್ದು, ಪ್ರತಿ ಕಾಲೇಜುಗಳಲ್ಲಿ ದಳವನ್ನು ತೆರೆಯಬೇಕು" ಎಂದರು. ಈ ಕಾರ್ಯಕ್ರಮದಲ್ಲಿ ರಾಜ್ಯ ಸಂಸ್ಥೆಯಿಂದ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀಮತಿ ಮಂಜುಳಾ ಸಿ., ರಾಜ್ಯ ಸಂಘಟನಾ ಆಯುಕ್ತರು (ಗೈಡ್ಸ್), ಶ್ರೀಮತಿ ಮಲ್ಲೇಶ್ವರಿ ಜುಜಾರೆ ಸಹಾಯಕ ಸಂಘಟನಾ ಆಯುಕ್ತರು (ಗೈಡ್ಸ್), ಶ್ರೀಮತಿ ಲತಾ ಮಂಜುನಾಥ್ ರೇಂಜರ್ ಲೀಡರ್ ಮತ್ತು ಶ್ರೀಮತಿ ಅನ್ನಪೂರ್ಣ ಕುರುಬೇಟೆ ರೇಂಜರ್ ಲೀಡರ್ ಆಗಮಿಸಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ ಸಿ.ಎಂ. ಕೆಂಗಾರ, ಜಿಲ್ಲಾ ತರಬೇತಿ ಆಯುಕ್ತರು, ಭಾರತ್ ಸ್ಕೌಟ್ಸ್–ಗೈಡ್ಸ್ ಸ್ವಾಗತವನ್ನು ಶ್ರೀ ಡಿ.ಡಿ. ಮಾಳಗಿ, ಸಹಾಯಕ ಜಿಲ್ಲಾ ಆಯುಕ್ತರು, ವಂದನೆಯನ್ನು ಶ್ರೀ ಎಸ್.ಆರ್. ನೇಕಾರ ಜಿಲ್ಲಾ ಕೋಶಾಧಿಕಾರಿಗಳು ಇವರು ನೆರವೇರಿಸಿದರು.



* ಸರಕಾರಿ ಪ್ರಥಮ ದರ್ಜೆ ಕಾಲೇಜು ಧಾರವಾಡ ಇಲ್ಲಿ ಧ್ವಜ ಚೀಟಿ ಬಿಡುಗಡೆ ಮಾಡಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ನಳಿನಿ ಬೆಂಗೇರಿ ಇವರು ವಹಿಸಿಕೊಂಡಿದ್ದರು. ಉದ್ಘಾಟಕರಾಗಿ ಶ್ರೀ ಭೀಮಪ್ಪ ಜಾದವ್ ಮಾಜಿ ಸೈನಿಕರು ಭಾಗವಹಿಸಿದ್ದರು. ಕಾಲೇಜಿನ ರೋವರ್ಸ್ ರೇಂಜರ್ಸ್‌ಗಳೊಂದಿಗೆ ಜಾಥಾ ಕಾರ್ಯಕ್ರಮ ಮಾಡಲಾಯಿತು.



## ಹಾಸನ

ಫ್ಲಾಗ್ ಡೇ ಆಚರಣೆ ಕಾರ್ಯಕ್ರಮವನ್ನು ಧ್ವಜ ಚೀಟಿಗಳನ್ನು ಬಿಡುಗಡೆ ಮಾಡುವುದರ ಮೂಲಕ ಆಚರಣೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಸರ್ಕಲ್ ಇನ್ಸ್ಪೆಕ್ಟರ್ ಶ್ರೀ ಮೋಹನ್ ಕುಮಾರ್ ರವರು ಧ್ವಜ ಚೀಟಿಗಳನ್ನು ಬಿಡುಗಡೆ ಮಾಡಿ ವಿದ್ಯಾರ್ಥಿಗಳಿಗೆ ಶುಭ ಕೋರಿದರು ಈ ಸಂದರ್ಭದಲ್ಲಿ ರಾಜ್ಯ ಸಹಕಾರ್ಯದರ್ಶಿ ಶ್ರೀ ಎಲ್.ಟಿ. ಲೋಕೇಶ್ ಧ್ವಜ ಚೀಟಿಗಳ ಬಿಡುಗಡೆಯ ಬಗ್ಗೆ ಪ್ರಾಸ್ತಾವಿಕ ನುಡಿಗಳನ್ನು ನುಡಿದರು ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಶ್ ಗುರೂಜಿ.



* ಹಾಸನ ಜಿಲ್ಲಾ ಸಂಸ್ಥೆ ಮತ್ತು ತಾಲೂಕು ಸಂಸ್ಥೆಯ ಮೌಂಟ್ ಕಾರ್ಮೆಲ್ ಶಾಲೆಯಲ್ಲಿ ದೀಕ್ಷಾ ಸಮಾರಂಭ ಕಾರ್ಯಕ್ರಮ ವನ್ನು ಆಯೋಜನೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಹುತಾತ್ಮ ಸೈನಿಕರಾದ ಕ್ಯಾಪ್ಟನ್ ಪ್ರಾಂಜಲ್ ರವರಿಗೆ ಶ್ರದ್ಧಾಂಜಲಿ ಯನ್ನು ಸಲ್ಲಿಸಲಾಯಿತು ನಂತರ ಸ್ಕೌಟ್ ಗೈಡ್ ವಿದ್ಯಾರ್ಥಿಗಳಿಗೆ ದೀಕ್ಷೆಯನ್ನು ನೀಡಲಾಯಿತು. ಧ್ವಜ ಚೀಟಿಗಳನ್ನು ಬಿಡುಗಡೆ ಮಾಡಿ ವಿದ್ಯಾರ್ಥಿಗಳಿಗೆ ಶುಭಕೋರಲಾಯಿತು. ಮಕ್ಕಳು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡಿದರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲಾ ಅಧ್ಯಕ್ಷರಾದ ಶ್ರೀ ಪಿಂಟೋರವರು ವಹಿಸಿಕೊಂಡಿದ್ದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಶ್ ಗುರೂಜಿ, ಮುಖ್ಯ ಅತಿಥಿಗಳಾಗಿ ಭಾಗವಹಿಸಿ ವಿದ್ಯಾರ್ಥಿಗಳಿಗೆ ಸ್ಕೌಟಿಂಗ್ ಚಟುವಟಿಕೆಯ ಮಹತ್ವವನ್ನು ತಿಳಿಸಿದರು. ಶ್ರೀಮತಿ ಪ್ರಿಯಾಂಕರವರು ಧ್ವಜ ಚೀಟಿ ಆಚರಣೆಯ ಬಗ್ಗೆ ತಿಳಿಸಿದರು. ಹಾಗೂ ಇದೇ ಸಂದರ್ಭದಲ್ಲಿ ಶಾಲಾ ಮುಖ್ಯೋಪಾಧ್ಯಾಯರು ಶ್ರೀ ಪ್ರಕಾಶ್‌ರವರಿಗೆ ಸ್ಥಳೀಯ ಸಂಸ್ಥೆಯಿಂದ ಅಭಿನಂದನೆಗಳನ್ನು ಸಲ್ಲಿಸಲಾಯಿತು.



* ಚನ್ನರಾಯಪಟ್ಟಣ ತಾಲ್ಲೂಕು ಸ್ಥಳೀಯ ಸಂಸ್ಥೆ ಮತ್ತು ಕಾಲೇಜಿನ ಸಂಯುಕ್ತಾಶ್ರಯದಲ್ಲಿ ರೋವರ್ಸ್ ಮತ್ತು ರೇಂಜರ್ಸ್ ವಿದ್ಯಾರ್ಥಿಗಳಿಗೆ ಪುನಶ್ಚೇತನ ಶಿಬಿರವನ್ನು ಮಾಡಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ತಾಲ್ಲೂಕು ಗೌರವ ಉಪಾಧ್ಯಕ್ಷರಾದ ಶ್ರೀಮತಿ ಭಾರತಿ ನಾಗೇಶ್‌ರವರು ನೇರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲಾ ಪ್ರಾಂಶುಪಾಲರು ಶ್ರೀ ಮಂಜುನಾಥ್‌ರವರು ವಹಿಸಿಕೊಂಡಿದ್ದರು. ಡಾ. ನಾಗೇಶ್‌ರವರು ವಿದ್ಯಾರ್ಥಿಗಳಿಗೆ ಪ್ರಥಮ ಚಿಕಿತ್ಸೆ  ಬಗ್ಗೆ ಮಾಹಿತಿ ನೀಡಿದರು. ಶ್ರೀಮತಿ ಪ್ರಿಯಾಂಕ ಎ.ಎಸ್.ಓ.ಸಿ.ರವರು ಕಾರ್ಯಕ್ರಮದ ವಿದ್ಯಾರ್ಥಿಗಳಿಗೆ ಪ್ರವೇಶದ ವಿಷಯವಾಗಿ ಮಾಹಿತಿಯನ್ನು ನೀಡಿದರು ತಾಲ್ಲೂಕು ಖಜಾಂಚಿ ಜಯರಾಮ್‌ರವರು ಸ್ವಚ್ಚತಾ ಕಾರ್ಯಗಳ ಬಗ್ಗೆ ಮಾಹಿತಿಯನ್ನು ನೀಡಿದರು. ರೋವರ್ ಲೀಡರ್ ಪ್ರವೀಣ್ ಮತ್ತು ರೇಂಜರ್ಸ್ ಲೀಡರ್ ಶ್ರೀ ನಿರೋಷರವರು ಕಾರ್ಯಕ್ರಮವನ್ನು ನಡೆಸಿಕೊಟ್ಟರು. ರೋವರ್ಸ್ ಮತ್ತು ರೇಂಜರ್ಸ್ ವಿದ್ಯಾರ್ಥಿಗಳು ಉಪಸ್ಥಿತರಿದ್ದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

* ಡಿಸೆಂಬರ್ 08 ರಂದು ಜಿಲ್ಲಾ ಸಂಸ್ಥೆ ಹಾಸನದಲ್ಲಿ ಜಿಲ್ಲಾ ಮಟ್ಟದ ಸ್ಕೌಟ್ ಮಾಸ್ಟರ್ ಗೈಡ್ ಕ್ಯಾಪ್ಟನ್ ಕಬ್ ಮಾಸ್ಟರ್ ಮತ್ತು ಫ್ಲಾಕ್ ಲೀಡರ್ಸ್ ಸಮಾವೇಶವನ್ನು ಆಯೋಜನೆ ಮಾಡಲಾಯಿತು. ಸಮಾವೇಶದ ಉದ್ಘಾಟನೆಯನ್ನು ಹಿರಿಯ ಸಿವಿಲ್ ನ್ಯಾಯಾಧೀಶರು ಸದಸ್ಯ ಕಾರ್ಯದರ್ಶಿ, ಜಿಲ್ಲಾ ಕಾನೂನು ಸೇವೆ ಪ್ರಾಧಿಕಾರ ಹಾಸನ ಇವರು ಕಾರ್ಯಕ್ರಮವನ್ನು ಗಿಡಕ್ಕೆ ನೀರು ಹಾಕುವುದರ ಮೂಲಕ ನೇರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಶ್ ಗುರೂಜಿರವರು ವಹಿಸಿಕೊಂಡಿದ್ದರು ಜಿಲ್ಲಾ ತರಬೇತಿ ಆಯುಕ್ತರು ಶ್ರೀ ಎಂ.ಎಂ. ಪ್ರಕಾಶ್ ಸರ್ವರನ್ನು ಸ್ವಾಗತಿಸಿ ಕಾರ್ಯಕ್ರಮದ ಪ್ರಸ್ತಾವಿಕ ನುಡಿಗಳನ್ನು ನುಡಿದರು ಜಿಲ್ಲಾ ತರಬೇತಿ ಆಯುಕ್ತರು (ಗೈಡ್) ಶ್ರೀಮತಿ ಕಾತ್ಯಾಯಿನಿ ಕಾರ್ಯಕ್ರಮದ ಉದೇಶ ಹಾಗೂ ಪುರ್ನಶ್ಚೇತನ ಶಿಬಿರದ ಬಗ್ಗೆ ಸಂಕ್ಷಿಪ್ತವಾಗಿ ನುಡಿದರು.



* ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರೌಢ ಶಾಲಾ ವಿಭಾಗ ಹೊಳೆನರಸೀಪುರದಲ್ಲಿ ಪ್ರೌಢ ಶಾಲಾ ಮೂಖ್ಯೋಪಾಧ್ಯಾಯರುಗಳ ಸಭೆಯನ್ನು  ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಸೋಮಲಿಂಗೇ ಗೌಡ ಅಧ್ಯಕ್ಷತೆಯಲ್ಲಿ ಸಭೆಯನ್ನು ಆಯೋಜನೆ ಮಾಡಲಾಯಿತು. ಸಭೆಯಲ್ಲಿ ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಶ್ ಗುರೂಜಿ ಶಾಲಾ ಮುಖ್ಯೋಪಾಧ್ಯಾಯರುಗಳಿಗೆ ಸ್ಕೌಟಿಂಗ್ ಮತ್ತು ಗೈಡಿಂಗ್ ಬಗ್ಗೆ ಮಾಹಿತಿಯನ್ನು ನೀಡಿದರು ತಾಲ್ಲೂಕು ಕಾರ್ಯದರ್ಶಿ ಶ್ರೀ ಕುಮುದ



ತಾಲ್ಲೂಕು ಹಂತದಲ್ಲಿ ನಡೆಯುತ್ತಿರುವ ಚಟುವಟಿಕೆಯ ಬಗ್ಗೆ ಮಾಹಿತಿಯನ್ನು ನೀಡಿದರು ಎ.ಎಸ್.ಓ.ಸಿ. ಶ್ರೀಮತಿ ಪ್ರಿಯಾಂಕ ದಳ ನೋಂದಣಿ ನವೀಕರಣದ ಬಗ್ಗೆ ಮಾಹಿತಿಯನ್ನು ನೀಡಿದರು ಜಿಲ್ಲಾ ಖಜಾಂಚಿ ಶ್ರೀ ಆರ್.ಎಸ್. ರಮೇಶ್ ತಾಲ್ಲೂಕು ಜಂಟಿ ಕಾರ್ಯದರ್ಶಿ ಶ್ರೀಮತಿ ವಿಜಯಮ್ಮ ತಾಲ್ಲೂಕು ಟಿ.ಪಿ.ಓ.ರವರು ಉಪಸ್ಥಿತರಿದ್ದರು.

* ಸ್ಥಳೀಯ ಸಂಸ್ಥೆಯ ಮಂಗಳೂರು ಪಬ್ಲಿಕ್ ಶಾಲೆಯಲ್ಲಿ ಸ್ಕೌಟ್ ಮತ್ತು ಗೈಡ್ ಉದ್ಘಾಟನಾ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಗಿತ್ತು. ಮಾನ್ಯ ರಾಜ್ಯ ಮುಖ್ಯ ಆಯುಕ್ತರು ಶ್ರೀ ಪಿ.ಜಿ.ಆರ್. ಸಿಂಧ್ಯರವರು ಕಾರ್ಯಕ್ರಮವನ್ನು ಉದ್ಘಾಟಿಸಿ "ಮಕ್ಕಳಿಗೆ ದೇವರ ಬಗ್ಗೆ ನಂಬಿಕೆ, ಶ್ರದ್ದೆ, ದೇವರೆಂದರೆ ಸತ್ಯವೇ ದೇವರು ಎಂಬ ಪರಿಕಲ್ಪನೆ ಅವರ ಮನಸ್ಸಿನಲ್ಲಿ ಆಳವಾಗಿ ನೆಲೆ ನಿಲ್ಲುವಂತೆ ಶ್ರದ್ಧೆ ಪ್ರಾಮಾಣಿಕತೆ ಅವರ ನಡೆ ನುಡಿಯಲ್ಲಿ ಹೊರಹೊಮ್ಮುವಂತಾಗಬೇಕು ಎಂದರು. ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಸನ್ಮಾನ್ಯ ಶ್ರೀ ಜವರೇಗೌಡರವರು ಸ್ಕೌಟ್ಸ್ ಗೈಡ್ಸ್ ಸಮವಸ್ತ್ರದಲ್ಲಿ ಎಲ್ಲ ಮಕ್ಕಳನ್ನು ನೋಡಿ ಇದೇ ರೀತಿಯಲ್ಲಿ ಎಲ್ಲ ಶಾಲೆಗಳಲ್ಲೂ ಸ್ಕೌಟ್ಸ್ ಗೈಡ್ಸ್ ಘಟಕಗಳನ್ನು ಪ್ರಾರಂಭಿಸಲು ಸಹಕಾರ ನೀಡುವುದಾಗಿ ಹೇಳಿದರು. ರಾಜ್ಯ ಕಾರ್ಯದರ್ಶಿಗಳಾದ ಶ್ರೀ ಗಂಗಪ್ಪಗೌಡರವರು ಮೂರು ವರ್ಷವಯಮಾನದಿಂದ ನೂರು ವರ್ಷ ವಯೋಮಾನದವರೆಗೂ ಸ್ಕೌಟ್ಸ್ ಗೈಡ್ಸ್ ಚಟುವಟಿಕೆಯಲ್ಲಿ ತೊಡಗಿಕೊಳ್ಳುವ ಅವಕಾಶವಿದೆ ನೀವೆಲ್ಲರೂ ಪುಣ್ಯವಂತರು ಎಂದು ಹೇಳಿದರು. ಈ ಸಂದರ್ಭದಲ್ಲಿ ರಾಜ್ಯ ಸಂಘಟನಾ ಆಯುಕ್ತರು ಶ್ರೀ ಪ್ರಭಾಕರ್ ಭಟ್, ಕ್ಷೇತ್ರ ಶಿಕ್ಷಣಾಧಿಕಾರಿಗಳು ಶ್ರೀಮತಿ ಮಂಜುಳಾ, ಜಿಲ್ಲಾ ಉಪಾಧ್ಯಕ್ಷರು ಶ್ರೀಮತಿ ಗಿರಿಜಾ ಅಂಬಿಕಾ, ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಶ್ ಗುರೂಜಿ ಉಪಸ್ಥಿತರಿದ್ದರು.



## ಹಾವೇರಿ

ನವೆಂಬರ್ 01 ರಂದು ಕರ್ನಾಟಕ ರಾಜ್ಯೋತ್ಸವ ದಿನಾಚರಣೆಯ ಕಾರ್ಯಕ್ರಮದಲ್ಲಿ ಕೆ.ಎಲ್.ಇ. ಪ್ರೌಢ ಶಾಲೆಯ ಗೈಡ್ಸ್ ತಂಡವು ಮತ್ತು ಜೆ.ಪಿ. ರೋಟರಿ ಪ್ರೌಢ ಶಾಲೆಯ ಸ್ಕೌಟ್ಸ್ ತಂಡವು ಪಥಸಂಚಲನೆಯಲ್ಲಿ ಭಾಗವಹಿಸಿದ್ದರು. ಕೆ.ಎಲ್.ಇ. ಪ್ರೌಢ ಶಾಲೆಯ ಗೈಡ್ಸ್ ತಂಡಕ್ಕೆ ಜಿಲ್ಲಾಡಳಿತ ವತಿಯಿಂದ ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ, ಸನ್ಮಾನ್ಯ ಶಾಸಕರು (ವಿಧಾನ ಸಭೆ) ಹಾವೇರಿ ಹಾಗೂ ಉಪ ಸಭಾಧ್ಯಕ್ಷರು, ಕರ್ನಾಟಕ ಸರ್ಕಾರ ಇವರು ಪ್ರಶಸ್ತಿ ಪತ್ರವನ್ನು ನೀಡಿ ಗೌರವಿಸಿದರು. ಕಾರ್ಯಕ್ರಮದಲ್ಲಿ ಶ್ರೀಮತಿ ಶಾರದಮ್ಮ ಗೈಡ್ ಕ್ಯಾಪ್ಟನ್, ಗೈಡ್ಸ್‌ಗಳು ಮತ್ತು ಶ್ರೀ ಎ.ಎಲ್. ಸೂರಣಗಿ ಹಾಜರಿದ್ದರು.



* ನವೆಂಬರ್ 07 ರಂದು ಧ್ವಜ ದಿನಾಚರಣೆಯನ್ನು ಮಾನ್ಯ ಜಿಲ್ಲಾಧಿಕಾರಿಗಳ ಕಾರ್ಯಾಲಯ ಹಾವೇರಿಯ ಕೋರ್ಟ್ ಹಾಲಿನಲ್ಲಿ ಜರುಗಿಸಲಾಯಿತು. ಧ್ವಜ ಚೀಟಿಯನ್ನು ಶ್ರೀ ವೀರಮಲ್ಲಪ್ಪ ಪೂಜಾರ ಅಪರ ಜಿಲ್ಲಾಧಿಕಾರಿಗಳು ಅವರು ಬಿಡುಗಡೆ ಗೊಳಿಸಿದರು. ನಂತರ ಮಾತನಾಡಿ "ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆ ಸಮಯಪ್ರಜ್ಞೆ, ಶಿಸ್ತು, ದೇಶಾಭಿಮಾನದ ಮೂಡಿಸುವ ಕಾರ್ಯಕ್ರಮ ಮತ್ತು ದೇಶ ಸೇವೆ ಮಾಡಲಿಕ್ಕೆ ಹೆಸರು ಮಾಡಿದ ಈ ಸಂಸ್ಥೆಯಾಗಿದೆ" ಎಂದು ತಿಳಿಸಿದರು. ಜಿಲ್ಲೆಯಲ್ಲಿ ಚಟುವಟಿಕೆ ಕಾರ್ಯಕ್ರಮಗಳಿಗೆ ನಾನು ಮತ್ತು ಮಾನ್ಯ ಜಿಲ್ಲಾಧಿಕಾರಿಗಳು ಸಹಕಾರ ನೀಡುವೆವು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಶ್ರೀ ಗಿರೀಶ್ ಪದಕಿ, ಉಪನಿರ್ದೇಶಕರು (ಆಡಳಿತ) ಹಾಗೂ ಜಿಲ್ಲಾ ಮುಖ್ಯ ಆಯುಕ್ತರು, ಶ್ರೀ ಆರ್.ಆರ್. ಕಾಶಪ್ಪನವರ, ಜಿಲ್ಲಾ ಕಾರ್ಯದರ್ಶಿ, ಶ್ರೀಮತಿ ಶೈಲಜಾ ಹಿಂಚಿಗೇರಿ, ಶ್ರೀ ರವಿ ಹಿಂಚಿಗೇರಿ, ಶ್ರೀ ಎಂ.ಆರ್. ಪಾಟೀಲ್ ಹಾಗೂ ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳು ಭಾಗವಹಿಸಿದ್ದರು.



* ನವೆಂಬರ್ 07 ರಂದು ಧ್ವಜ ದಿನಾಚರಣೆಯನ್ನು ಜಿಲ್ಲಾ ಪಂಚಾಯತ್ ಕಛೇರಿಯ ಮೀಟಿಂಗ್ ಹಾಲಿನಲ್ಲಿ ಜರುಗಿಸಲಾಯಿತು. ಧ್ವಜ ಚೀಟಿಯನ್ನು ಶ್ರೀ ಅಕ್ಷಯ್ ಶ್ರೀಧರ್ ಜಿಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಹಾವೇರಿರವರು ಬಿಡುಗಡೆ ಗೊಳಿಸಿದರು. ನಂತರ ಮಾತನಾಡಿ ವಿದ್ಯಾರ್ಥಿಯಾಗಿದ್ದಾಗ ರಾಜ್ಯ ಪುರಸ್ಕಾರ ಪಡೆದಿರುತ್ತೇನೆ ಎಂದು ತಿಳಿಸಿ ಸಂಸ್ಥೆಯ ಬಗ್ಗೆ ಎಲ್ಲಾ ಮಾಹಿತಿಯನ್ನು ಕೇಳಿದ ನಂತರ ಜಿಲ್ಲಾ ಸಂಸ್ಥೆಗೆ 25 ವರ್ಷ ಆದ ಹಿನ್ನೆಲೆಯಲ್ಲಿ ಜನವರಿಯಲ್ಲಿ ಒಳ್ಳೆಯ ಕಾರ್ಯಕ್ರಮ ಮಾಡೋಣ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಶ್ರೀ ಗಿರೀಶ್ ಪದಕಿ, ಉಪನಿರ್ದೇಶಕರು (ಆಡಳಿತ) ಹಾಗೂ ಜಿಲ್ಲಾ ಮುಖ್ಯ ಆಯುಕ್ತರು ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ, ಜಿಲ್ಲಾ ಸಂಸ್ಥೆಯ ತರಬೇತಿಗಳ ಬಗ್ಗೆ ಮತ್ತು ಸಂಘಟನೆಯ ಬಗ್ಗೆ ವಿವರವಾದ ಮಾಹಿತಿ ನೀಡಿದರು. ಶ್ರೀ ಆರ್.ಆರ್. ಕಾಶಪ್ಪನವರ, ಜಿಲ್ಲಾ ಕಾರ್ಯದರ್ಶಿ, ಶ್ರೀಮತಿ ಶೈಲಜಾ ಹಿಂಚಿಗೇರಿ, ಶ್ರೀ ರವಿ ಹಿಂಚಿಗೇರಿ ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳು ಭಾಗವಹಿಸಿದ್ದರು.




## ಕಲಬುರಗಿ

ಡಿಸೆಂಬರ್ 15 ರಂದು ಜಿಲ್ಲಾ ಸಂಸ್ಥೆ ಕಲಬುರ್ಗಿ ಹಾಗೂ ಗ್ರಾಮ ಪಂಚಾಯತ್ ಹೆಬ್ಬಾಳ್ ಮೂಲ ತರಬೇತಿ ಶಿಬಿರದ ಉದ್ಘಾಟನೆ ನೆರವೇರಿತು. ಉದ್ಘಾಟಕರಾಗಿ ಶ್ರೀಮತಿ ಅಶ್ವಿನಿ ಸುನಿಲ್ ವಟ್ ವಟಿ ಗ್ರಾಮ ಪಂಚಾಯತ್ ಅಧ್ಯಕ್ಷರು ಶ್ರೀ ಸಿ.ಬಿ. ಪಾಟೀಲ್ ಓಕಳಿ, ಸಹಾಯಕ ರಾಜ್ಯ ಆಯುಕ್ತರು (ಸ್ಕೌಟ್ಸ್) ಕಲಬುರ್ಗಿ ವಿಭಾಗ, ಕಲಬುರ್ಗಿ ಭಾಗವಹಿಸಿದ್ದರು. ಮುಖ್ಯ ಅತಿಥಿಯಾಗಿ ಶ್ರೀ ಬಸವರಾಜ ಶಿವುಗೋಳ ಮಾಜಿ ಗ್ರಾಮ ಪಂಚಾಯಿತ್ ಅಧ್ಯಕ್ಷರು ಭಾಗವಹಿಸಿದ್ದರು.




## ಕಾರವಾರ (ಉ.ಕ.)

ನವೆಂಬರ್ 21–2023 ರಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕುಮಟಾ, ಜಿಲ್ಲಾ ಸಂಸ್ಥೆ,ಹಾಗೂ ಕುಮಟಾ ಸ್ಥಳೀಯ ಸಂಸ್ಥೆ ವತಿಯಿಂದ ರೋವರ್ಸ್ ಮತ್ತು ರೇಂಜರ್ಸ್ ವಿದ್ಯಾರ್ಥಿಗಳಿಗೆ ಪ್ರೇರಣಾ ಶಿಬಿರವನ್ನು ಆಯೋಜಿಸಲಾಗಿತ್ತು. ಈ ಶಿಬಿರದ ಅಧ್ಯಕ್ಷತೆಯನ್ನು ಶ್ರೀಮತಿ ವಿಜಯ ಡಿ. ನಾಯಕ್, ಪ್ರಾಂಶುಪಾಲರು ವಹಿಸಿದ್ದರು. ಶ್ರೀಮತಿ ಮಮತಾ ನಾಯಕ್ ವಕೀಲರು ಕುಮುಟಾ ಇವರು ಕಾನೂನು ಮಾಹಿತಿಯನ್ನು ನೀಡಿದರು. ಡಾಕ್ಟರ್ ಶ್ರೀ ಸಂಜಯ್ ಇವರು ಆರೋಗ್ಯ ಸಲಹೆ ನೀಡಿದರು. ಶ್ರೀಮತಿ ಪ್ರತಿಭಾ ನಾಯಕ್ ಇವರು ರೇಂಜರ್ ವಿದ್ಯಾರ್ಥಿನಿಯರಿಗೆ ಪ್ರೇರಣ ವಿಷಯವಾಗಿ ಮಾಹಿತಿ ನೀಡಿದರು. ಈ ಸಂರ್ಭದಲ್ಲಿ ಜಿಲ್ಲಾ ಸಂಸ್ಥೆ ವತಿಯಿಂದ ಶ್ರೀಮತಿ ಬೇಬಿ ಪಡಿಯರ್, ಜಿಲ್ಲಾ ತರಬೇತಿ ಆಯುಕ್ತರು ಗೈಡ್ ಶ್ರೀಕರಿಸಿದ್ದಪ್ಪ ಟಿ., ಸಹಾಯಕ ರಾಜ್ಯ ಸಂಘಟನಾ ಆಯುಕ್ತರು ರೋವರ್–ರೇಂಜರ್ ಲೀಡರ್ಸ್‌ಗಳು ಹಾಗೂ ಇತರೆ ಉಪನ್ಯಾಸಕ ವರ್ಗದವರು ಮತ್ತು ರೋವರ್ ವಿದ್ಯಾರ್ಥಿಗಳು ಈ ಶಿಬಿರದಲ್ಲಿ ಭಾಗವಹಿಸಿದ್ದರು.

* ನವೆಂಬರ್ 29 ರಂದು ಜನತಾ ವಿದ್ಯಾಲಯ ಮಿರ್ಜಾನ್ ಶಾಲೆ, ಆರ್.ಇ.ಎಸ್. ಪದವಿಪೂರ್ವ ವಿದ್ಯಾಲಯ ಹಳದೀಪುರ, ಎಂ.ಪಿ.ಇ. ಸೊಸೈಟಿಯ ಕೇಂದ್ರೀಯ ವಿದ್ಯಾಲಯ ಹೊನ್ನಾವರ, ಬಾಲ ಮಂದಿರ ಪ್ರೌಢಶಾಲೆ ಕಾರವಾರ ಇಲ್ಲಿ ಸ್ಕೌಟ್ ಗೈಡ್ ಘಟಕದಿಂದ ಕ್ಯಾ.ಎಂ.ವಿ. ಪ್ರಾಂಜಲ್ ವೀರಯೋಧನಿಗೆ ನಮನ ಸಲ್ಲಿಸಲಾಯಿತು. ಸರಕಾರಿ ಹಿರಿಯ ಪ್ರಾಥಮಿಕ ಕನ್ನಡ ವನ್ನಳ್ಳಿ ಶಾಲೆಯಲ್ಲಿ ಅಗಲಿದ ವೀರಯೋಧ ಕ್ಯಾಪ್ಟನ್ ಎಂ.ವಿ. ಪ್ರಾಂಜಲ್‌ಗೆ ಪುಷ್ಪ ನಮನ ಮಾಡಿ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಈ ಸಂರ್ಭದಲ್ಲಿ ಡಯಟ್ ಕುಮಟಾದ ಉಪನ್ಯಾಸಕರಾದ ಶ್ರೀಮತಿ ಮಹಾದೇವಿ ಮೇಡಂ ತಾಲ್ಲೂಕು ನೋಡಲ್ ಅಧಿಕಾರಿ ಅವರು ಉಪಸ್ಥಿತರಿದ್ದರು.

* ನವೆಂಬರ್ 30 ರಂದು ಜನತಾ ವಿದ್ಯಾಲಯ ಮಿರ್ಜಾನ ಶಾಲೆಯಲ್ಲಿ ಕನಕದಾಸರ ಜಯಂತಿ ನಡೆಯಿತು. ಶಿಕ್ಷಕ ಶ್ರೀ ರಾಜು ರಾಮನಾಯ್ಕ, ಕನಕದಾಸರ ವೇಷದೊಂದಿಗೆ ಮಿರ್ಜಾನ ಗ್ರಾಮದ ಸುತ್ತಮುತ್ತ ದಾಸರ ಪದಗಳೊಂದಿಗೆ ಸ್ಕೌಟ್ಸ್ ವಿದ್ಯಾರ್ಥಿಗಳೊಂದಿಗೆ ಜನಜಾಗೃತಿ ಮೂಡಿಸಿದರು.

* ನವೆಂಬರ್ 29 ಮತ್ತು 30 ರಂದು ಕಾರವಾರ ಜಿಲ್ಲೆ ಭಟ್ಕಳ ತಾಲ್ಲೂಕು ಸ್ಥಳೀಯ ಸಂಸ್ಥೆ ವತಿಯಿಂದ ದ್ವಿತೀಯ ಸೋಪಾನ ಪರೀಕ್ಷಾ ಶಿಬಿರವನ್ನು ಶಿರಾಲಿಯ ಚಿತ್ರಾಪುರ ಸರ್ಕಾರಿ ಹಿರಿಯ ಮಾದರಿ ಪ್ರಾಥಮಿಕ ಶಾಲೆಯಲ್ಲಿ ಮಾನ್ಯ ಶ್ರೀ ತಿಪ್ಪೇಸ್ವಾಮಿ ತಹಶೀಲ್ದಾರ್ ಹಾಗೂ ದಂಡಾಧಿಕಾರಿಗಳು ಮತ್ತು ಸ್ಥಳೀಯ ಸಂಸ್ಥೆ ಅಧ್ಯಕ್ಷರು ಮಾನ್ಯ ಶ್ರೀ ವಿ.ಡಿ. ಮೊಗೇರ ಕ್ಷೇತ್ರಾಧಿಕಾರಿಗಳು, ದೈಹಿಕ ಶಿಕ್ಷಣ ಪರೀಕ್ಷಕರದ ಶ್ರೀ ದತ್ತಾತ್ರೇಯ ಅವರು, ಶ್ರೀ ಗಿರೀಶ್ ನಾಯಕ್ ಶಿಕ್ಷಣ ಸಂಘದ ಅಧ್ಯಕ್ಷರು, ಶ್ರೀ ಜಿ. ಹೆಗಡೆ ದೈಹಿಕ ಶಿಕ್ಷಣ ಸಂಘದ ಅಧ್ಯಕ್ಷರು ಇವರೆಲ್ಲರ ನೇತೃತ್ವದಲ್ಲಿ ನಡೆಯಿತು. ಈ ಸಂರ್ಭದಲ್ಲಿ ಕ್ಯಾಪ್ಟನ್‌ಎಂವಿ ಪ್ರಾಂಜಲ್ ಇವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಮಾರನೇ ದಿನ ತಾಲ್ಲೂಕ್ ರ್‍ಯಾಲಿ ಕಾರ್ಯಕ್ರಮ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯ ಶ್ರೀಮತಿ ಬೀನಾ ವೈದ್ಯ



ಮ್ಯಾನೇಜಿಂಗ್ ಡೈರೆಕ್ಟರ್ ಶ್ರೀಮತಿ ಪುಷ್ಪಲತಾ ವೈದ್ಯ ಇವರು ಉದ್ಘಾಟಿಸಿದರು. ಈ ಸಂರ್ಭದಲ್ಲಿ ಶ್ರೀ ದೈಮನೆ ಸ್ಥಳೀಯ ಸಂಸ್ಥೆ ಅಧ್ಯಕ್ಷರು, ನ್ಯೂ ಇಂಗ್ಲಿಷ್ ಪಿ.ಯು. ಕಾಲೇಜ್ ಪ್ರಾಂಶುಪಾಲರು ಶ್ರೀ ವೀರೇಂದ್ರ ಶಾನಭಾಗ್, ಎಡಿಸಿ ಸ್ಕೌಟ್ ಹಾಗೂ ಪಂಚಾಯತ್ ಅಧ್ಯಕ್ಷರು, ಶಾಲಾ ಮುಖ್ಯೋಪಾಧ್ಯಾಯರು, ಪದಾಧಿಕಾರಿಗಳು 180 ಮಕ್ಕಳು 22 ಶಿಕ್ಷಕರು ಭಾಗವಹಿಸಿದ್ದರು.

* ಡಿಸೆಂಬರ 01 ರಂದು ಶಾಲಾ ಶಿಕ್ಷಣ ಇಲಾಖೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ, ಸ್ಕೌಟ್ಸ್ ಸ್ಥಳೀಯ ಸಂಸ್ಥೆ ಅಂಕೋಲ ಹಾಗೂ ಲಯನ್ಸ್ ಕ್ಲಬ್ ಸಿಟಿ ಇವರ ಸಹಯೋಗದೊಂದಿಗೆ ನೀರಿನ ಸಂರಕ್ಷಣೆಯ ಕುರಿತು ಕಾರ್ಯಕ್ರಮವನ್ನು ಆಚರಿಸಲಾಯಿತು. ಡಾ. ವಿಜಯ ದೀಪ ಅವರ ಅಧ್ಯಕ್ಷತೆಯಲ್ಲಿ ನಡೆದ ಈ ಸಮಾರಂಭದಲ್ಲಿ ದೈಹಿಕ ಪರಿವೀಕ್ಷಕರಾದ ಶ್ರೀ ಮಂಜುನಾಥ ನಾಯಕರವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಶ್ರೀ ಬೀರಣ್ಣ ನಾಯಕರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದರು. ಈ ಕಾರ್ಯಕ್ರಮದಲ್ಲಿ ಖ್ಯಾತ ಪರಿಸರ ಪ್ರೇಮಿಗಳು ಹಾಗೂ ನಿವೃತ್ತ ಪ್ರಾಂಶುಪಾಲರಾದ ಶ್ರೀ ವಸಂತ್ ನಾಯಕರವರನ್ನು ಸನ್ಮಾನಿಸಲಾಯಿತು. ಇವರು ಮಾತನಾಡಿ ಪರಿಸರ ಸಂರಕ್ಷಣೆಯ ಮಹತ್ವ ಹಾಗೂ ಪ್ರಸ್ತುತ ಅಗತ್ಯತೆ ಹಾಗೂ ತಾವು ಪರಿಸರಕ್ಕೆ ನೀಡಿದ ಕೊಡುಗೆಗಳನ್ನು ಮಕ್ಕಳಿಗೆ ಮನಮುಟ್ಟುವಂತೆ ವಿವರಿಸಿದರು. ಈ ಕಾರ್ಯಕ್ರಮಕ್ಕೆ ಶಾಲಾ ಮುಖ್ಯಾಧ್ಯಾಪಕರಾದ ಶ್ರೀಮತಿ ಕುಸುಮಾ ಸ್ವಾಗತಿಸಿದರೆ ಶಿಕ್ಷಕರಾದ ಶ್ರೀ ಮಂಜುನಾಥ್ ನಾಯಕರವರು ಸನ್ಮಾನಿತರನ್ನು ಪರಿಚಯಿಸಿ. ಕಾರ್ಯಕ್ರಮದಲ್ಲಿ ಭಾಗವಹಿಸಿದವರಿಗೆ ವಂದಿಸಿದರು. ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ನಾಗರಾಜ್ ಹನೆಹಳ್ಳಿ ಕಾರ್ಯಕ್ರಮ ಆಯೋಜಿಸಿ ಪ್ರಾಸ್ತವಿಕ ನುಡಿಯನ್ನಾಡಿದರೆ ಸ್ಕೌಟ್ ಶಿಕ್ಷಕಿಯರಾದ ಶ್ರೀಮತಿ ಕಸ್ತೂರಿ ಆಗೇರ್ ಕರ್ಾಯರ್ಕ್ರಮ ನಿರ್ವಹಿಸಿದರು. ನೀರಿನ ಸಂರಕ್ಷಣೆಯ ಕುರಿತು ನಡೆಸಿದ ಸ್ಪರ್ಧೆಯಲ್ಲಿ ವಿಜೇತರಾದ ಮಕ್ಕಳಿಗೆ ಪ್ರಶಸ್ತಿ ಪತ್ರ ಹಾಗೂ ಪಾರಿತೋಷಕಗಳನ್ನು ವಿತರಿಸಲಾಯಿತು.



* ಡಿಸೆಂಬರ್ 02 ರಂದು ಜನತಾ ವಿದ್ಯಾಲಯ ಮಿರ್ಜಾನ ಶಾಲೆಯ ಸ್ಕೌಟ್ಸ್ ವಿದ್ಯಾರ್ಥಿಗಳ ಚಾರಣ ಹಾಗೂ ವನ ವಿದ್ಯಾ ಕೌಶಲ್ಯ ಮತ್ತು ಸ್ವಚ್ಛತಾ ಕಾರ್ಯಕ್ರಮ ಯಾಣದಲ್ಲಿ ನಡೆಯಿತು. ಕಾರ್ಯಕ್ರಮಕ್ಕೆ ಕುಮಟಾ ಸ್ಥಳೀಯ ಸ್ಕೌಟ್ಸ್ ಸಂಸ್ಥೆಯ ಉಪಾಧ್ಯಕ್ಷರು ಹಾಗೂ ಖಜಾಂಜಿ ಶ್ರೀಮತಿ ಪಲ್ಲವಿ ಮಡಿವಾಳ, ಎಸ್.ಎಸ್. ಭಟ್ ಲೋಕೇಶ್ವರ್ ಜಿಲ್ಲಾ ಸ್ಥಾನಿಕ ಆಯುಕ್ತರು ಮತ್ತು ಶ್ರೀಮತಿ ಬೇಬಿ ಪಡಿಯಾರ ಜಿಲ್ಲಾ ಗೈಡ್ಸ್ ತರಬೇತಿ ಆಯುಕ್ತರು ಭಾಗವಹಿಸಿದ್ದರು. ಯಾಣದ ದೇವಸ್ಥಾನದ ಸುತ್ತಮುತ್ತ ಸ್ವಚ್ಛತೆ ಕಾರ್ಯ ನಡೆಯಿತು.

* ಡಿಸೆಂಬರ್ 03 ರಂದು ಹೊನ್ನಾವರ ತಾಲ್ಲೂಕಿನ ಹಳದಿಪುರ ಗ್ರಾಮದ ಅಗ್ರಹಾರದಲ್ಲಿ ಲೀಲಾಗಣಪತಿ ಚಾರಿಟೇಬಲ್ ಟ್ರಸ್ಟ್ ವತಿಯಿಂದ 2022–23ನೇ ಸಾಲಿನಲ್ಲಿ ರಾಜ್ಯ ಪುರಸ್ಕಾರ ಪರೀಕ್ಷೆಯಲ್ಲಿ ಭಾಗವಹಿಸಿ ತೇರ್ಗಡೆ ಹೊಂದಿದ ಸ್ಕೌಟ್–ಗೈಡ್ಸ್‌ಗಳು ಹಳದಿಪುರ ಗ್ರಾಮಕ್ಕೆ ಸಂಬಂಧಿಸಿದ ವಿದ್ಯಾರ್ಥಿಗಳು, ಇತರೆ ವಿಭಾಗಗಳಲ್ಲಿ ವಿಭಾಗ ಮಟ್ಟ ಮತ್ತು ರಾಜ್ಯ ಮಟ್ಟದಲ್ಲಿ ರಾಷ್ಟ್ರ ಮಟ್ಟದಲ್ಲಿ ಪ್ರಶಸ್ತಿಗಳನ್ನು ಪಡೆದಿರುವ ವಿವಿಧ ಶಾಲೆಗಳ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರವನ್ನು ಹಮ್ಮಿಕೊಳ್ಳಲಾಗಿತ್ತು. ಡಾ. ಜಿ.ಜಿ. ಸಭಾಹಿತ ಟ್ರಸ್ಟ್‌ನ ಅಧ್ಯಕ್ಷರು ಹಾಗೂ ಜಿಲ್ಲಾ ಮುಖ್ಯ ಆಯುಕ್ತರು ಇವರು ಸಭೆಗೆ ಆಗಮಿಸಿದ ಎಲ್ಲರನ್ನು ಸ್ವಾಗತಿಸಿದರು. ನಂತರ ಕ್ಯಾಪ್ಟನ್ ಎಂ.ವಿ. ಪ್ರಾಂಜಲ್ ಇವರಿಗೆ ಶ್ರದ್ಧಾಂಜಲಿ ಸಮರ್ಪಿಸಲಾಯಿತು. ಈ ಸಂರ್ಭದಲ್ಲಿ ಟ್ರಸ್ಟ್ ವತಿಯಿಂದ ಪ್ರಾಚೀನ ಗ್ರಂಥಗಳನ್ನು ಅರ್ಪಣೆ ಮಾಡುವ ಕಾರ್ಯಕ್ರಮವಾಗಿ ವರ್ಷದ ನಾಲ್ಕು ಮಾಸಗಳ ಗ್ರಂಥಗಳನ್ನು ಪಡೆಯಲಾಯಿತು. ಮಾನ್ಯ ಶಾಸಕರಾದ ಶ್ರೀಯುತ ದಿನಕರ್ ಶೆಟ್ಟಿ ಇವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಸಮಾಜ ಸೇವಕರಾದ ಶ್ರೀ ಸೂರಜ್ ನಾಯ್ಕ ಸೋನಿ. ಮಾನ್ಯ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ವಿ.ಡಿ. ಮೊಗೇರ ಭಟ್ಕಳ, ಹೊನ್ನಾವರ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಮಾನ್ಯಶ್ರೀ ಜಿ.ಎಸ್. ನಾಯಕ್, ಕುಮಟಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಶ್ರೀ ಆರ್.ಎಲ್. ಭಟ್ ಹಾಗೂ ಕೆ.ಡಿ.ಸಿ.ಸಿ. ಬ್ಯಾಂಕಿನ ಅಧ್ಯಕ್ಷರು ಶ್ರೀ ಕುಮಟಾ, ಶ್ರೀ ಅನಂತ ಕುಮಾರ್ ಹೆಗಡೆ ಸಮಾಜ ಸೇವಕರು ಶಿರಸಿ ಮುಂತಾದವರು ಸಭೆಯಲ್ಲಿ ಉಪಸ್ಥಿತರಿದ್ದರು. ಈ ಕಾರ್ಯಕ್ರಮದ ನಿರ್ವಹಣೆಯನ್ನು ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಕಾರ್ಯದರ್ಶಿ, ಶ್ರೀ ಆರ್.ಟಿ. ಹೆಬ್ಬಾರ್, ಶ್ರೀ ಕೆ.ವಿ. ಹೆಗಡೆ ನಿವೃತ್ತ ಪ್ರಾಧ್ಯಾಪಕರು. ಕವಲಕ್ಕಿ ಶ್ರೀಮತಿ ವನಿತಾ ನಾಯಕ್ ಜಂಟಿ ಕಾರ್ಯದರ್ಶಿ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆ, ಕಾರವಾರ. ಇವರುಗಳು ನಡೆಸಿದರು. ಈ ಸಮಾರಂಭದಲ್ಲಿ ಗ್ರಾಮ ಪಂಚಾಯತ್ ಅಧ್ಯಕ್ಷರು. ಉಪಾಧ್ಯಕ್ಷರು. ಅತಿಥಿಗಳು, ಗಣ್ಯರು, ಸಮಾಜ ಸೇವಕರು



ಕುಟುಂಬ ವರ್ಗದವರು ಮತ್ತು ಸ್ಕೌಟ್ಸ್ ಗೈಡ್ಸ್ ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು, 5 ತಾಲ್ಲೂಕಿನ ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು, ಕಾರ್ಯದರ್ಶಿಗಳು, ಶಿಕ್ಷಕರು, ಪೋಷಕ ವರ್ಗದವರು ಮತ್ತು ಪುರಸ್ಕಾರ ಪಡೆಯುವ ವಿದ್ಯಾರ್ಥಿಗಳು ಊರ ನಾಗರಿಕರು ಸುಮಾರು 230 ಸದಸ್ಯರು ಭಾಗವಹಿಸಿದ್ದರು. ಇವರೆಲ್ಲರಿಗೂ ಶ್ರೀ ಗಣಪತಿ ಸಭಾಹಿತರವರು ವಂದಿಸಿದರು.

* ಡಿಸೆಂಬರ್ 05 ರಂದು ಕುಮಟಾ ತಾಲ್ಲೂಕಿನ ಬರ್ಗಿ ಗ್ರಾಮದ ಹತ್ತಿರ ಇರುವ ಕಿಮಾನಿ ಸರ್ಕಾರಿ ಉರ್ದು ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಸ್ಕೌಟ್ಸ್-ಗೈಡ್ಸ್, ಕಬ್ಸ್ ಮತ್ತು ಬುಲ್‌ಬುಲ್ ವಿಭಾಗದಿಂದ ನಾಲ್ಕು ದಳಗಳ ಉದ್ಘಾಟನಾ ಕಾರ್ಯಕ್ರಮ ನಡೆಯಿತು. ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಶ್ರೀ ಎಸ್.ಎಸ್. ಹುಸೇನಿ, ಎಲ್.ಟಿ. ಕಬ್ ಭಾಗವಹಿಸಿದ್ದರು. ಶ್ರೀಮತಿ ಬೇಬಿ ಪಡಿಯರ್ ಡಿಟಿಸಿ (ಗೈಡ್) ಶ್ರೀ ಕರಿಸಿದಪ್ಪ ಎ.ಎಸ್.ಓ.ಸಿ., ಶ್ರೀ ಅನಿಲ್ ಎಸ್., ಡಿ.ಎಂ.ಸಿ. ಸದಸ್ಯರು ಹಾಗೂ ಪೋಷಕ ವರ್ಗದವರು ಗ್ರಾಮದ ಹಿರಿಯ ನಾಗರಿಕರು ಶಾಲೆಯ ಕಬ್ಬು-ಬುಲ್‌ಬುಲ್, ಸ್ಕೌಟ್-ಗೈಡ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.

* ಡಿಸೆಂಬರ್ 15 ರಂದು ಅಂಕೋಲ ಸ್ಥಳೀಯ ಸಂಸ್ಥೆ ವತಿಯಿಂದ ದ್ವಿತೀಯ ಸೋಪಾನ ಪರೀಕ್ಷಾ ಶಿಬಿರವನ್ನು ನಗರ ಪ್ರೌಢ ಶಾಲೆಯಲ್ಲಿ ಆಯೋಜಿಸಲಾಗಿತ್ತು. ಈ ಶಿಬಿರದ ಉದ್ಘಾಟನಾ ಕಾರ್ಯಕ್ರಮಕ್ಕೆ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಮಾನ್ಯ ಶ್ರೀಮತಿ ಮಂಗಳ ದೇವಿ ಪಾಟೀಲ್ ಆಗಮಿಸಿದ್ದರು. ಶ್ರೀ ಮಂಜುನಾಥ ನಾಯಕ್, ದೈಹಿಕ ಶಿಕ್ಷಣ ಪರಿವೀಕ್ಷಕರು ಶಾಲಾ ಮುಖ್ಯೋಪಾಧ್ಯಾಯರು ಸ್ಕೌಟ್-ಗೈಡ್ ಶಿಕ್ಷಕರು 120 ಸ್ಕೌಟ್-ಗೈಡ್ ವಿದ್ಯಾರ್ಥಿಗಳು ಇತರೆ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಕೋಲಾರ

ನವೆಂಬರ್ 17 ರಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಾಲೂರು ಇಲ್ಲಿ ರೋವರ್ಸ್-ರೇಂಜರ್ಸ್ ಘಟಕ ಮತ್ತು ವಿವಿಧ ಘಟಕಗಳ ಸಹಯೋಗದಲ್ಲಿ ಸ್ವಯಂ ಪ್ರೇರಿತ ರಕ್ತದಾನ ಶಿಬಿರವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಅಶ್ವತ್ ನಾರಾಯಣ್‌ರವರು ವಹಿಸಿದ್ದರು, ಕಾಲೇಜಿನ ದಳ ನಾಯಕರಾದ ಡಾ. ಶಿಲ್ಪ ಮತ್ತು ಡಾ. ಗುರುಪ್ರಕಾಶ್‌ರವರ ಮಾರ್ಗದರ್ಶನದಲ್ಲಿ ರೋವರ್ಸ್ ಮತ್ತು ರೇಂಜರ್ಸ್ ಕರ್ತವ್ಯ ನಿರ್ವಹಿಸಿದರು.




* ನವೆಂಬರ್ 20 ರಂದು ಸ್ಕೌಟ್ ಭವನ ಕೋಲಾರ ಇಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣ ಅಧಿಕಾರಿಗಳ ಮಾರ್ಗದರ್ಶನದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ತರಬೇತಿ ಪಡೆದ ಶಿಕ್ಷಕರಿಗೆ ಮಾದಕ ವಸ್ತುಗಳು ಮತ್ತು ರಸ್ತೆ ನಿಯಮಗಳು ಬಗ್ಗೆ ಜಾಗೃತಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಸುಮಾರು 150 ಶಿಕ್ಷಕರು ಭಾಗವಹಿಸಿ ಯಶಸ್ವಿಗೊಳಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು, ಪೋಲಿಸ್ ಸಿಬ್ಬಂದಿ ಮುಂತಾದವರು ಕರ್ತವ್ಯ ನಿರ್ವಹಿಸಿದರು.



* ನವೆಂಬರ್ 25 ರಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಪೋಲಿಸ್ ಇಲಾಖೆ ಹಾಗೂ ಸ್ಕೌಟ್ಸ್ ಗೈಡ್ಸ್ ಸಹಯೋಗದಲ್ಲಿ ರಾಷ್ಟ್ರೀಯ ಮಧುಮೇಹ ದಿನಾಚರಣೆ ಅಂಗವಾಗಿ ನಡೆದ ಮಾದಕ ವಸ್ತುಗಳ ಬಗ್ಗೆ 5ಕೆ ರನ್ ಜಾಗೃತಿ ಕಾರ್ಯಕ್ರಮದಲ್ಲಿ ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್‌ಗಳು ಸೇವೆಯನ್ನು ಸಲ್ಲಿಸಿದರು. ಈ ಸಂದರ್ಭದಲ್ಲಿ ಸೇವೆ ಸಲ್ಲಿಸದ ಎಲ್ಲಾರಿಗೂ ಅಭಿನಂದನಾ ಪತ್ರ ವಿತರಿಸಲಾಯಿತ್ತು.

* ನವೆಂಬರ್ 27 ರಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತ್, ಶಾಲಾ ಶಿಕ್ಷಣ ಇಲಾಖೆ ಸಹಯೋಗದಲ್ಲಿ ನಡೆದ ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಮತ್ತು ಕಲೋತ್ಸವ ಕಾರ್ಯಕ್ರಮದಲ್ಲಿ ಮಾನ್ಯ ಉಪನಿರ್ದೇಶಕರು ಆದೇಶದಂತೆ ಸೇವೆ ಸಲ್ಲಿಸಲಾಯಿತ್ತು. ಜಿಲ್ಲಾ ಸಂಘಟಕರಾದ ಶ್ರೀ ವಿಶ್ವನಾಥ ವಿ. ಕೋಲಾರ ಅವರ ನೇತೃತ್ವದಲ್ಲಿ ಸುಮಾರು 150 ಸ್ಕೌಟ್ಸ್-ಗೈಡ್ಸ್ ರೋವರ್ಸ್-ರೇಂಜರ್ಸ್ ವಿದ್ಯಾರ್ಥಿಗಳು ಸೇವೆಯನ್ನು ಸಲ್ಲಿಸಿದರು. ಸೇವೆಯನ್ನು ಪರಿಗಣಿಸಿ ಮಾನ್ಯ ಉಪನಿರ್ದೇಶಕರು ಅಭಿನಂದಿಸಿದರು.

* ಡಿಸೆಂಬರ್ 01 ರಿಂದ 03ರ ವರಿಗೆ ಕೋಲಾರ ಸ್ಥಳೀಯ ಸಂಸ್ಥೆ ದ್ವಿತಿಯ ಸೋಪಾನ ಪೂರ್ವ ಸಿದ್ದತಾ ಪರಿಕ್ಷಾ ಶಿಬಿರವನ್ನು ಸ್ಕೌಟ್ ಭವನ ಕೋಲಾರ ಇಲ್ಲಿ ಆಯೋಜಿಸಲಾಗಿತ್ತು. ಶಿಬಿರದಲ್ಲಿ ಸುಮಾರು 180 ಸ್ಕೌಟ್ಸ್-ಗೈಡ್ಸ್, ಭಾಗವಹಿಸಿದರು. ಮಾನ್ಯ ಶ್ರೀ ಕೆ.ವಿ. ಶಂಕರಪ್ಪ ಶಿಬಿರವನ್ನು ಉದ್ಘಾಟಿಸಿದರು. ಜಿಲ್ಲಾ ಸಂಸ್ಥೆ ಹಾಗೂ ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು ಭಾಗವಹಿಸಿ ಯಶಸ್ವಿಗೊಳಿಸಿದರು.

* ಡಿಸೆಂಬರ್ 08 ರಂದು ಸ್ಕೌಟ್ ಭವನ ಕೋಲಾರ ಇಲ್ಲಿ ಶಿಕ್ಷಣ ಇಲಾಖೆಯ ಕ್ಷೇತ್ರಶಿಕ್ಷಣಾಧಿಕಾರಿಗಳು, ಕ್ಷೇತ್ರ ಸಮನ್ವಯಾಧಿಕಾರಿಗಳು, ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿಗಳು, ಬಿ.ಆರ್.ಸಿ., ಸಿ.ಆರ್.ಪಿ., ಇ.ಸಿ.ಓ., ನೋಡಲ್ ಅಧಿಕಾರಿಗಳು ಒಂದು ದಿನದ ಮಾಹಿತಿ ಶಿಬಿರವನ್ನು




ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ರಾಜ್ಯ ಸಂಸ್ಥೆಯ ರಾಜ್ಯ ಕಾರ್ಯದರ್ಶಿಗಳಾದ ಶ್ರೀ ಗಂಗಪ್ಪಗೌಡರವರು ಮಾಹಿತಿ ಶಿಬಿರವನ್ನು ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ವಿ. ಶಂಕರಪ್ಪ ವಹಿಸಿದ್ದರು. ಈ ಸಂದರ್ಭದಲ್ಲಿ ಜಿಲ್ಲಾ ನೋಡಲ್ ಅಧಿಕಾರಿ ಶ್ರೀ ಅಶೋಕ್, ರಾಜ್ಯ ತರಬೇತಿ ಆಯುಕ್ತೆ ಶ್ರೀಮತಿ ಕೆ.ವಿ. ಶ್ಯಾಮಲ, ಜಿಲ್ಲಾ ಆಯುಕ್ತ ಶ್ರೀ ಕೆ.ಆರ್. ಸುರೇಶ್, ಜಿಲ್ಲಾ ಕಾರ್ಯದರ್ಶಿ ಶ್ರೀ ವಿ.ಎಂ. ನಾರಾಯಣಸ್ವಾಮಿ, ಕೋಶಾಧಿಕಾರಿ ಶ್ರೀ ಉಮೇಶ್, ಜಿಲ್ಲಾ ಸಮಾನ್ವಯಾಧಿಕಾರಿ ಶ್ರೀ ಚಂದ್ರಕಲಾ ಹಾಗೂ ಎಲ್ಲಾ ತಾಲ್ಲೂಕುಗಳ ಕ್ಷೇತ್ರಶಿಕ್ಷಣಾಧಿಕಾರಿಗಳು, ಕ್ಷೇತ್ರ ಸಮಾನ್ವಯಾಧಿಕಾರಿಗಳು ಹಾಗೂ ಜಿಲ್ಲೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕ್ಷೇತ್ರ ಸಮಾನ್ವಯಾಧಿಕಾರಿಗಳು, ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿಗಳು, ಬಿ.ಆರ್.ಸಿ., ಸಿ.ಆರ್.ಪಿ., ಇ.ಸಿ.ಓ., ನೋಡಲ್ ಅಧಿಕಾರಿಗಳು ಹಾಗೂ ಜಿಲ್ಲಾ ಮತ್ತು ಸ್ಥಳಿಯ ಪದಾಧಿಕಾರಿಗಳು ಭಾಗವಹಿಸಿದ್ದರು.

* ಡಿಸೆಂಬರ್ 11 ರಂದು ಮಾಲೂರು ತಾಲ್ಲೂಕಿನ ಜೆ.ಎಸ್.ಎಸ್. ಪಬ್ಲಿಕ್ ಶಾಲೆ ಮಾಲೂರು ಇಲ್ಲಿ ವಿದ್ಯಾರ್ಥಿಗಳಿಗೆ ಸ್ಕೌಟ್ಸ್ ಗೈಡ್ಸ್ ಮಾಹಿತಿ ಶಿಬಿರ ಆಯೋಜಿಸಲಾಗಿತ್ತು. ಇದೇ ದಿನ ಸ್ಕೌಟ್ಸ್ ಮತ್ತು ಗೈಡ್ಸ್ ವಿವಿಧ ಶಿಬಿರಗಳಲ್ಲಿ ಭಾಗವಹಿಸಿದ ಪ್ರಶಸ್ತಿ ಪತ್ರಗಳನ್ನು ವಿತರಿಸಲಾಯಿತು. ಮತ್ತು ಧ್ವಜ ದಿನಾಚರಣೆ ಕಾರ್ಯಕ್ರಮ ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಜೆ.ಎಸ್.ಎಸ್. ಸಮೂಹ ಸಂಸ್ಥೆಯ ನೋಡಲ್ ಅಧಿಕಾರಿ ಶ್ರೀ ಮಹೇಶ್ವರಪ್ಪ, ಸ್ಥಳಿಯ ಸಂಸ್ಥೆ ಕಾರ್ಯದರ್ಶಿ ಶ್ರೀ ಟಿ.ಎಂ. ವೆಂಕಟೇಶ್, ಜಿಲ್ಲಾ ಸಂಘಟಕ ಶ್ರೀ ವಿಶ್ವನಾಥ ವಿ., ಕೋಲಾರ, ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ರಮ್ಯ ಹಾಗೂ ಸ್ಕೌಟ್ ಮಾಸ್ಟರ್ ಶ್ರೀ ರಮೇಶ್ ಹಾಗೂ ಮುಂತಾದವರು ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಿದರು.

* ಡಿಸೆಂಬರ್ 18 ರಂದು ಶ್ರೀನಿವಾಸಪುರ ಸ್ಥಳಿಯ ಸಂಸ್ಥೆ ವ್ಯಾಪ್ತಿಯ ಸ್ಕೌಟ್ಸ್ ಮತ್ತು ಗೈಡ್ಸ್ ಶಿಕ್ಷಕರಿಗೆ ಜಿಲ್ಲಾ ಮತ್ತು ತಾಲ್ಲೂಕು ಆರೋಗ್ಯ ಇಲಾಖೆ ವತಿಯಿಂದ ಸರ್ಕಾರದ ಆರೋಗ್ಯ ಇಲಾಖೆ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ಕ್ಷೇತ್ರ ಸಮಾನ್ವಯಾಧಿಕಾರಿಗಳಾದ ಶ್ರೀಮತಿ ವಸಂತಮ್ಮ ಮತ್ತು ತಾಲ್ಲೂಕು ವೈದಾಧಿಕಾರಿಗಳಾದ ಶ್ರೀ ಮೊಹಮ್ಮದ್ ಷರೀಫ್ ಉದ್ಘಾಟಿಸಿದರು. ಆರೋಗ್ಯ ಇಲಾಖೆಯ ವಿವಿಧ ಪದಾಧಿಕಾರಿಗಳು ಆರೋಗ್ಯ ಇಲಾಖೆಯ ಕಾರ್ಯಕ್ರಮಗಳು ಮತ್ತು ಮಾಹಿತಿ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಕಾರ್ಯದರ್ಶಿ ಶ್ರೀ ವಿ.ಎಂ. ನಾರಾಯಣಸ್ವಾಮಿ, ಜಿಲ್ಲಾ ಸಂಘಟಕ ಶ್ರೀ ವಿಶ್ವನಾಥ ವಿ. ಕೋಲಾರ, ಸ್ಥಳೀಯ ಸಂಸ್ಥೆ ಪದಾಧಿಕಾರಿ ಶ್ರೀ ಟಿ.ಎಂ. ರಾಮಕೃಷ್ಣೆಗೌಡ, ಪದಾಧಿಕಾರಿಗಳಾದ ಶ್ರೀ ಚಂದ್ರಪ್ಪ, ಶ್ರೀ ರವೀಂದ್ರ, ಶ್ರೀ ರವಿಕುಮಾರ್ ಮುಂತಾದವರು. ಭಾಗವಹಿಸಿ ಯಶಸ್ವಿಗೊಳಿಸಿದರು.



## ಕೊಪ್ಪಳ

* ನವೆಂಬರ್ 07 ರಂದು ಯಲಬುರ್ಗಾ ಸ್ಥಳೀಯ ಸಂಸ್ಥೆಯಿಂದ ಸ್ಕೌಟ್ ಗೈಡ್ ಶಿಕ್ಷಕರು ಪದಾಧಿಕಾರಿಗಳಾದ ಶ್ರೀ ವೀರಪ್ಪ ಗಾಣಿಗೇರ್ ತಾಲ್ಲೂಕು ಕಾರ್ಯದರ್ಶಿ ಶ್ರೀ ವೀರನಗೌಡ ಪೂಲೀಸ್ ಪಾಟೀಲ್ ರಾಜ್ಯ ಸ್ಕೌಟ್ ಪ್ರತಿನಿಧಿಗಳು ಹಾಗೂ ಸರ್ವಪದಾಧಿಕಾರಿಗಳೊಂದಿಗೆ, ಬಿ.ಇ.ಓ. ಕಾರ್ಯಾಲಯ, ತಹಶೀಲ್ದಾರ್ ಕಾರ್ಯಾಲಯ ಖಜಾನೆ ಇಲಾಖೆ, ತಾಲ್ಲೂಕು ಪಂಚಾಯತ್, ಆರಕ್ಷಕರ ಠಾಣೆ ಅಧಿಕಾರಿಗಳೊಂದಿಗೆ ಧ್ವಜ ಚೀಟಿಗಳನ್ನು ಬಿಡುಗಡೆಗೊಳಿಸಲಾಯಿತು. ಶಾಲೆಯ ಸ್ಕೌಟ್ಸ್-ಗೈಡ್ ವಿದ್ಯಾರ್ಥಿಗಳು ಮತ್ತು ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಇದ್ದರು.

* ನವೆಂಬರ್ 07 ರಂದು ತಹಶೀಲ್ದಾರ್ ಕಾರ್ಯಾಲಯ ಶಿರಸ್ಥೆದಾರ್ ಶ್ರೀ ರವಿಕುಮಾರ್, ಬಿ.ಇ.ಓ. ಶ್ರೀ ವೆಂಕಟೇಶ್, ಶ್ರೀ ರಾಮಚಂದ್ರಪ್ಪ, ಶ್ರೀಮತಿ ಶಾರದಾ ಟ್ರಾಫಿಕ್, ಪಿ.ಎಸ್.ಐ. ಗಂಗಾವತಿ ಮತ್ತು ಇಲಾಖೆಯ ಅಧಿಕಾರಿಗಳು ಎಲ್ಲರು ಧ್ವಜ ಚೀಟಿಗಳನ್ನು ಬಿಡುಗಡೆ ಮಾಡಿ, ವಿದ್ಯಾರ್ಥಿಗಳಿಗೆ ಶುಭಕೋರಿದರು.





* ನವೆಂಬರ್ 07 ರಂದು ಸಂಸ್ಥಾಪನಾ ಬಿ.ಇ.ಓ. ಕಾರ್ಯಾಲಯದಲ್ಲಿ ತಾಲ್ಲೂಕು ದೈಹಿಕ ಶಿಕ್ಷಣಾಧಿಕಾರಿಗಳ ಶ್ರೀ ನಾಗಪ್ಪ ಬಿಳಿಯಪ್ಪನವರ ಮತ್ತು ಇಲಾಖೆಯ ಸರ್ವಾಧಿಕಾರಿಗಳು ಧ್ವಜ ಚೀಟಿ ಬಿಡುಗಡೆಗೊಳಿಸಿದರು.

## ಶಿರಸಿ

ನವೆಂಬರ್ 29 ರಂದು ಶಿರಸಿ ಜಿಲ್ಲಾ ಸಂಸ್ಥೆಯಿಂದ ಜಮ್ಮು ಕಾಶ್ಮೀರ ರಜೋರಿಯಲ್ಲಿ ಹುತ್ಮಾತರಾದ 63ನೇ ರೈಫಲ್ ಕ್ಯಾಪ್ಟನ್ ಎಂ.ವಿ. ಪ್ರಾಂಜಲ್ (ರಾಷ್ಟ್ರಪತಿ ಸ್ಕೌಟ್ಸ್) ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಶ್ರೀ ವಿ.ಹೆಚ್. ಭಟ್ಕಳ, ಜಿಲ್ಲಾ ಆಯುಕ್ತರು ಸ್ಕೌಟ್ಸ್, ಶ್ರೀಮತಿ ವಿರೇಶ್ ಮಾದರ, ಎ.ಎಸ್.ಓ.ಸಿ. ಹಾಗೂ ರೋವರ್ಸ್-ರೇಂಜರ್ಸ್ ಉಪಸ್ಥಿತರಿದ್ದರು.



* ಡಿಸೆಂಬರ್ 05 ರಿಂದ 07ರ ವರೆಗೆ ನಡೆದ ರಾಜ್ಯ ಮಟ್ಟದ ಟೇಬಲ್ ಟೆನಿಸ್ ಕ್ರೀಡಾಕೂಟದಲ್ಲಿ ಶಿರಸಿ ತಾಲ್ಲೂಕಿನ ಸ್ಕೌಟ್ಸ್ ಮಾಸ್ಟರ್ ಹಾಗೂ ಗೈಡ್ಸ್ ಕ್ಯಾಪ್ಟನ್‌ಗಳು ಸೇವಾ ಕಾರ್ಯನಿರ್ವಹಿಸಿದರು.

* ಡಿಸೆಂಬರ್ 09 ರಂದು ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯ ಮುಂಡಗೋಡದಲ್ಲಿ ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ಒಂದು ದಿನದ ಪುನಶ್ಚೇತನ ಕಾರ್ಯಕ್ರಮವನ್ನು ಆಯೋಜಿಸಲಾಯಿತು.

* ನವೆಂಬರ್ 07 ರಂದು ಶಿರಸಿ ಜಿಲ್ಲಾ ಸಂಸ್ಥೆಯಿಂದ ಸಂಸ್ಥಾಪನ ದಿನಾಚರಣೆಯ ಅಂಗವಾಗಿ ಮಾನ್ಯ ಸಹಾಯಕ ಆಯುಕ್ತರು ಹಾಗೂ ಉಪವಿಭಾಗೀಯ ದಂಡಾಧಿಕಾರಿಗಳಾದ ಶ್ರೀ ದೇವರಾಜ್ ಆರ್. ಧ್ವಜ ಚೀಟಿ ಬಿಡುಗಡೆಗೊಳಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಪದಾಧಿಕಾರಿಗಳು ಹಾಗೂ ರೋವರ್ಸ್-ರೇಂಜರ್ಸ್ ಉಪಸ್ಥಿತರಿದ್ದರು.



* ನವೆಂಬರ್ 09 ರಂದು ಶಿರಸಿ ಜಿಲ್ಲಾ ಸಂಸ್ಥೆಯಿಂದ "ನಮ್ಮ ನಡೆ ಸರ್ಕಾರಿ ಶಾಲೆ ಕಡೆ" ಎಂಬ ವಿನೂತನ ಕಾರ್ಯಕ್ರಮದಲ್ಲಿ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ತಿಗಣಿಯ ಶಾಲೆ ಮೈದಾನ



ಸ್ವಚ್ಛತೆ, ಕಂಪೌಂಡ್, ಅಡುಗೆ ಕೋಣೆ, ಶೌಚಾಲಯ, ಬಣ್ಣ ಬಳಿಯಲಾಯಿತು. ಕಿಚನ್ ಗಾರ್ಡನ್ ನಿರ್ಮಿಸಲಾಯಿತು. ಈ ಕಾರ್ಯಕ್ರಮಕ್ಕೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜ್ ಶಿರಸಿ ಹಾಗೂ ಎಂ.ಇ.ಎಸ್. ಮಹಾವಿದ್ಯಾಲಯ ಶಿರಸಿ 30 ರೋವರ್ಸ್-ರೇಂಜರ್ಸ್‌ಗಳು ಸಹಕಾರ ನೀಡಿದರು.

## ವಿಜಯಪುರ

ಸರ್ಕಾರಿ ಕನ್ನಡ ಹೆಣ್ಣು ಮಕ್ಕಳ ಮಾದರಿ ಪ್ರಾಥಮಿಕ ಶಾಲೆ, ನಿಡಗುಂಡಿ, ಶಾಲೆಯ ಸ್ಕೌಟ್ಸ್ ಮತ್ತು ಗೈಡ್ಸ್‌ಗಳ ಕಾರ್ಯದರ್ಶಿಗಳಾದ ಶ್ರೀ ಎಸ್.ಬಿ. ಭಜಂತ್ರಿರವರ ಮಾರ್ಗದರ್ಶನದಲ್ಲಿ ಶಾಲೆಯ 100 ಮೀಟರ್ ಸುತ್ತಲೂ ಇರುವ ಅಂಗಡಿಗಳಿಗ ಭೇಟಿ ನೀಡಿ ತಂಬಾಕು ಪದಾರ್ಥಗಳ ಮಾರಾಟ ಕಾನೂನು ಬಾಹಿರ ಆದ್ದರಿಂದ ಶಾಲೆಯ ಸುತ್ತಲೂ ಇರುವ ಅಂಗಡಿ ಮಾಲೀಕರು ತಂಬಾಕು ಪದಾರ್ಥಗಳನ್ನು ಮಾರಬೇಡಿ ಎಂದು ತಿಳುವಳಿತೆಯನ್ನು ಅಂಗಡಿಗಳ ಮಾಲೀಕರಿಗೆ ನೀಡಿದರು.



## ಅಭಿನಂದನೆಗಳು....



ಚಿಕ್ಕಮಗಳೂರು ನಗರದ ಎಸ್.ಆರ್. ಪ್ರೈಮ್ ನರ್ಚರ್ ಇಂಟರ್ ನ್ಯಾಷನಲ್ ಶಾಲೆಯಲ್ಲಿ 10ನೇ ತರಗತಿ ವ್ಯಾಸಂಗ ಮಾಡುತ್ತಿರುವಂತಹ ಗೈಡ್ **ಚೇತನಾ ಟಿ.ಪಿ.** D/o ಫಣಿರಾಜ್ ಟಿ.ಕೆ. ರಾಜ್ಯ ಪುರಸ್ಕಾರ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದು ಈ ವಿದ್ಯಾರ್ಥಿಯು ಡಿಸೆಂಬರ್ 09 ರಂದು ಮೈಸೂರಿನಲ್ಲಿ ನಡೆದ ರಾಜ್ಯ ಮಟ್ಟದ ಕವಿತೆ ರಚನೆ ಸ್ಪರ್ಧೆಯಲ್ಲಿ ವಿಜೇತರಾಗಿ ರಾಷ್ಟ್ರ ಮಟ್ಟಕ್ಕೆ ಆಯ್ಕೆ ಆಗಿದ್ದಾರೆ.

## ರಾಮನಗರ

ಸರ್ಕಾರಿ ಪದವಿ ಪೂರ್ವ ಕಾಲೇಜು ಚಿಕ್ಕಮುದುವಾಡಿ ಇಲ್ಲಿನ ನೇತಾಜಿ ಸುಭಾಷ್ ಚಂದ್ರಬೋಸ್ ರೋವರ್ಸ್–ರೇಂಜರ್ಸ್ ಘಟಕದ ರೋವರ್–ರೇಂಜರ್‌ಗಳು ರಾಮನಗರ ಜಿಲ್ಲಾ ಆರೋಗ್ಯ ಕೇಂದ್ರದ ಸಹಭಾಗಿತ್ವದಲ್ಲಿ ತಂಬಾಕು ಸೇವನೆಯಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಿದರು.



## ಶಿವಮೊಗ್ಗ

ನವೆಂಬರ್ 20 ರಿಂದ 26ರ ವರೆಗೆ ಅತಿಶಯ ಶ್ರೀ ಕ್ಷೇತ್ರ ಹೊಂಬುಜ, ಹುಂಚ, ಹೊಸನಗರ ತಾಲ್ಲೂಕಿನಲ್ಲಿ ಕಬ್ ಮಾಸ್ಟರ್, ಸ್ಕೌಟ್ ಮಾಸ್ಟರ್, ಫ್ಲಾಕ್ ಲೀಡರ್ ಹಾಗೂ ಗೈಡ್ ಕ್ಯಾಪ್ಟನ್‌ಗಳ ಮೂಲ ತರಬೇತಿ ಶಿಬಿರವು ನಡೆಯಿತು. ಈ ಶಿಬಿರದಲ್ಲಿ ಒಟ್ಟು 72 ಶಿಬಿರಾರ್ಥಿಗಳು ಸೇರಿದ್ದು. ಕಬ್ ವಿಭಾಗಕ್ಕೆ ನಾಯಕರಾಗಿ ಶ್ರೀಮತಿ ಸಂಧ್ಯಾರಾಣಿ, ಎಲ್.ಟಿ (ಕಬ್) ಫ್ಲಾಕ್ ವಿಭಾಗಕ್ಕೆ ನಾಯಕಿಯಾಗಿ ಶ್ರೀಮತಿ ಮೀನಾಕ್ಷಮ್ಮ, ಎ.ಎಲ್.ಟಿ (ಫ್ಲಾಕ್) ನಾಯಕರಾಗಿ ಶ್ರೀ ಸಿ.ಎಂ. ಪರಮೇಶ್ವರಯ್ಯ, ಎ.ಎಲ್.ಟಿ (ಸ್ಕೌ), ಗೈಡ್ ವಿಭಾಗದ ನಾಯಕಿಯಾಗಿ ಶ್ರೀಮತಿ ರಾಧಿಕಾ ಮುರಳಿ, ಎ.ಎಲ್.ಟಿ (ಗೈ) ಕಾರ್ಯನಿರ್ವಹಿಸಿದರು. ಶ್ರೀ ಕೆ. ರವಿರವರು ಈ ಕ್ಯಾಂಪಿನ ಉಸ್ತುವಾರಿ ವಹಿಸಿದ್ದರು. ನವೆಂಬರ್ 21 ರಂದು ಉದ್ಘಾಟನಾ ಸಮಾರಂಭ ಹಮ್ಮಿಕೊಳ್ಳಲಾಗಿತ್ತು. ಉದ್ಘಾಟನೆಯುನ್ನು ತೀರ್ಥಹಳ್ಳಿಯ ಕ್ಷೇತ್ರಶಿಕ್ಷಣಾಧಿಕಾರಿಯವರಾದ ಶ್ರೀಗಣೇಶರವರು ನೆರವೇರಿಸಿ ಶಿಬಿರಾರ್ಥಿಗಳನ್ನುದ್ದೇಶಿಸಿ ಮಾತನಾಡಿದರು. ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಕೆ.ಪಿ. ಬಿಂದುಕುಮಾರ್‌ರವರು ಅಧ್ಯಕ್ಷತೆ ವಹಿಸಿದ್ದರು. ಪದ್ಮಾಂಭಾ ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಪ್ರಹ್ಲಾದರವರು ಉಪಸ್ಥಿತರಿದ್ದರು, ಜಿಲ್ಲಾ ಪದಾಧಿಕಾರಿಗಳು ನಾಲ್ಕು ವಿಭಾಗದ ನಾಯಕ/ಕಿಯರು ಸಹಾಯಕರು ಉಪಸ್ಥಿತರಿದ್ದರು. ನವೆಂಬರ್ 24 ರಂದು ರಾಜ್ಯ ಕಾರ್ಯದರ್ಶಿಯವರಾದ ಶ್ರೀ ಗಂಗಪ್ಪಗೌಡರವರು





ಕ್ಯಾಂಪಿಗೆ ಭೇಟಿ ನೀಡಿ ಸ್ಕೌಟಿಂಗ್ ಗೈಡಿಂಗ್ ವಿಷಯವಾಗಿ ಮಾತನಾಡಿದರು. ಇದೇ ಸಂದರ್ಭದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಹೆಚ್.ಡಿ. ರಮೇಶ ಶಾಸ್ತ್ರಿರವರು ಉಪಸ್ಥಿತರಿದ್ದು ಶಿಬಿರಾರ್ಥಿಗಳಿಗೆಲ್ಲ ತಮ್ಮ ಸ್ವಂತ ದುಡ್ಡಿನಿಂದ ಬ್ಯಾಗನ್ನು ವಿತರಿಸಿದರು ಹಾಗೂ ಶಿಬಿರಾರ್ಥಿಗಳನ್ನುದ್ದೇಶಿಸಿ ಮಾತನಾಡಿದರು. ನವೆಂಬರ್ 25 ರಂದು ಮೂಲ ತರಬೇತಿ ಶಿಬಿರದ ಸಮಾರೋಪ ಸಮಾರಂಭ ನಡೆಯಿತು.

* ನವೆಂಬರ್ 29 ರಂದು ಕ್ಯಾಪ್ಟನ್ ಎಂ.ವಿ.ಪ್ರಾಂಜಲ್‌ರವರಿಗೆ ಜಿಲ್ಲಾ ಸಂಸ್ಥೆ ವತಿಯಿಂದ ಶ್ರದ್ಧಾಂಜಲಿ ಅರ್ಪಣೆ ಮಾಡಲಾಯಿತು.

* ಶಿಕಾರಿಪುರ ಸ್ಥಳೀಯ ಸಂಸ್ಥೆಯ ವತಿಯಿಂದ ಶಿಕಾರಿಪುರ ಹುತಾತ್ಮಯೋದರ ಸ್ಮಾರಕದ ಹತ್ತಿರ ಕ್ಯಾಪನ್ ಪ್ರಾಂಜಲ್‌ರವರಿಗೆ ಶ್ರದ್ಧಾಂಜಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಪರೋಪಕಾರಂ ಸಂಸ್ಥೆ, ಬಾಪೂಜಿ ವಿದ್ಯಾ ಸಂಸ್ಥೆ, ಮಾಜಿ ಸೈನಿಕರ ಸಂಘ, ಪತ್ರಕರ್ತರ ಸಂಘ, ಕನ್ನಡ ಸಾಹಿತ್ಯ ಪರಿಷತ್, ಜಾನಪದ ಸಾಹಿತ್ಯ ಪರಿಷತ್ ಇವುಗಳ ಸಹಯೋಗದೊಂದಿಗೆ ಯಶಸ್ವಿಯಾಗಿ ನಡೆಯಿತು. ಈ ಕಾರ್ಯಕ್ರಮಕ್ಕೆ ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು ಪರೋಪಕಾರಂತಂಡದ ನಾಯಕರಾದ ಶ್ರೀ ಲಕ್ಷ್ಮಣ್, ಬಾಪೂಜಿ ವಿದ್ಯಾ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಪಾಪಯ್ಯರವರು, ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷರಾದ ಶ್ರೀಮತಿ ಶಿವರಂಜಿನಿ ಸುದರ್ಶನ್ ರವರು, ಜನಪದ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಶ್ರೀ ಹುಚ್ಚರಾಯಪ್ಪ ನವರು ಮಾಜಿ ಸೈನಿಕರ ಸಂಘದ ಅಧ್ಯಕ್ಷರಾದ ಶ್ರೀ ಶಂಕರ್ ನಾಯ್ಕರವರು, ಮಾಜಿ ಸೈನಿಕರಾದ ಶ್ರೀ ಚುರ್ಚ ಗುಂಡಿ ಶ್ರೀ ಬಸವರಾಜ್‌ರವರು ಶ್ರೀ ಯೋದಾನಂದ ಹಾಗೂ ಅವರ ಸುಪುತ್ರ ಕರುನಾಡಿನ ವೀರಯೋಧ ಶ್ರೀ ಎಂ.ವೈ. ಆಕಾಶರವರು (ಹಾಲಿ ಕಾಶ್ಮೀರದ ತಿಜೋರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ) ಡಾ|| ಗುರುದತ್ತ, ಸಾರ್ವಜನಿಕರು, ಸ್ಕೌಟ್ಸ್, ಗೈಡ್ಸ್, ರೋವರ್ಸ್ ರೇಂಜರ್ಸ್‌ಗಳು ಉಪಸ್ಥಿತರಿದ್ದರು.

* ಜೈನ್ ಪಬ್ಲಿಕ್ ಶಾಲೆ, ನಿಧಿಗೆ, ಶಿವಮೊಗ್ಗ ತಾಲ್ಲೂಕು ಇಲ್ಲಿ 3 ಬನ್ನಿ ಟವುಟೋಲಾ ಉದ್ಘಾಟನೆಗೆ ಜಿಲ್ಲಾ ಗೈಡ್ ಆಯುಕ್ತರಾದ ಶ್ರೀಮತಿ ಶಕುಂತಲಾ ಚಂದ್ರಶೇಖರ್, ಜಿಲ್ಲಾ ಕಾರ್ಯದರ್ಶಿ ಶ್ರೀ ಹೆಚ್. ಪರಮೇಶ್ವರ್, ರಾಜ್ಯ ಸಹಾಯಕ ಸಂಘಟನಾ ಆಯುಕ್ತರಾದ ಶ್ರೀಮತಿ ಭಾರತಿ ಡಾಯಸ ಜೈನ್ ಪಬ್ಲಿಕ್ ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಪ್ರಿಯದರ್ಶಿನಿ, ಸ್ಕೌಟ್ ಮಾಸ್ಟರ್ ಆದ ಶ್ರೀ ಸಂತೊಷ ಹಾಗೂ 3 ಬನ್ನಿ ಆಂಟಗಳು ಶಾಲೆಯ ಕೋ–ಆರ್ಡಿನೇಟರ್ ಶಾಲೆಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ತುಮಕೂರು

ನವೆಂಬರ್ 18 ರಂದು ಜಿಲ್ಲಾ ಸಂಸ್ಥೆ ವತಿಯಿಂದ ಕಬ್, ಬುಲ್ ಬುಲ್, ವಿದ್ಯಾರ್ಥಿಗಳಿಗೆ ಪದಕ ತರಬೇತಿ ಶಿಬಿರವನ್ನು ಆಯೋಜಿಸಲಾಗಿತ್ತು, ಶಿಬಿರದ ನಾಯಕತ್ವ, ಶ್ರೀ ಬಸವಚಾರ್, pre alt (c) ಮತ್ತು ರಾಜ್ಯ ಪ್ರತಿನಿಧಿ ಸ್ಕೌಟ್, ವಹಿಸಿದ್ದರು,, ಜಿಲ್ಲಾ ಸಂಘಟಕರು ಶಿಬಿರದಲ್ಲಿ 108 ಕಬ್ ಮತ್ತು ಬುಲ್ ಬುಲ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.



* ನವೆಂಬರ್ 23 ರಂದು ಸ್ಥಳೀಯ ಸಂಸ್ಥೆ ಗುಬ್ಬಿ ತಾಲೂಕಿನಲ್ಲಿ ಒಂದು ದಿನದ ಪುನಶ್ಚೇತನ ಕಾರ್ಯಾಗಾರವನ್ನು ನಡೆಸಲಾಯಿತು. ಕಾರ್ಯಕ್ರಮವನ್ನು ತಾಲ್ಲೂಕು ಮುಖ್ಯ ಕಾರ್ಯನಿರ್ವಹಣ ಅಧಿಕಾರಿಗಳಾದ ಶ್ರೀ ಪರಮೇಶ್‌ರವರು ಉದ್ಘಾಟಿಸಿದರು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಶಿವಕುಮಾರ್ ವಹಿಸಿದ್ದರು, ಜಿಲ್ಲಾ ಜಂಟಿ ಕಾರ್ಯದರ್ಶಿಗಳು ಹಾಗೂ ಗುಬ್ಬಿ ತಾಲ್ಲೂಕು ನೋಡಲ್ ಅಧಿಕಾರಿಗಳು ಶ್ರೀ ಅಂಜನಪ್ಪರವರು ಉಪಸ್ಥಿತರಿದ್ದರು ಹಾಗೂ ತಾಲ್ಲೂಕು ಸಮನ್ವಯ ಅಧಿಕಾರಿಗಳು, ದೈಹಿಕ ಪರಿವೀಕ್ಷಕರು, ಜಿಲ್ಲಾ ತರಬೇತಿ ಆಯುಕ್ತರುಗಳು, ಜಿಲ್ಲಾ ಸಂಘಟಕರು ಮತ್ತು ಲಯನ್ ಸಂಸ್ಥೆಯ ಮತ್ತು ತಾಲ್ಲೂಕು ಸಂಸ್ಥೆ ಪದಾಧಿಕಾರಿಗಳು ಹಾಗೂ 30 ದಳ ನಾಯಕರುಗಳು ಇದೇ ಸಂದರ್ಭದಲ್ಲಿ ಭಾಗವಹಿಸಿದ್ದರು.



* ನವೆಂಬರ್ 24 ರಂದು ಸ್ಥಳೀಯ ಸಂಸ್ಥೆ ತಿಪಟೂರು ತಾಲೂಕಿನಲ್ಲಿ ಒಂದು ದಿನದ ಪುನಶ್ಚೇತನ ಕಾರ್ಯಾಗಾರವನ್ನು ಮತ್ತು ಮಾಹಿತಿ ಶಿಬಿರ ನಡೆಸಲಾಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಚಂದ್ರಯ್ಯರವರು ನೆರವೇರಿಸಿದರು, ಕಾರ್ಯಾಗಾರದ ಅಧ್ಯಕ್ಷತೆಯನ್ನು ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಡಾ. ಶ್ರೀಧರ್ ವಹಿಸಿದ್ದರು, ತಾಲ್ಲೂಕು ಕಾರ್ಯದರ್ಶಿ ಶ್ರೀ ನಾಗರಾಜ್ ಹಾಗೂ ತಾಲ್ಲೂಕು ದೈಹಿಕ ಪರಿವೀಕ್ಷಕರು, ಶ್ರೀಮತಿ ಶಮಂತರವರು, ಜಿಲ್ಲಾ



ತರಬೇತಿ ಆಯುಕ್ತರು ಸ್ಕೌಟ್ಸ್ ಶ್ರೀ ಗಂಗಾಧರ, ಜಿಲ್ಲಾ ಸಂಘಟಕರು ಶ್ರೀ ನವೀನ್ ಕುಮಾರ್ ಮತ್ತು ಸಂಸ್ಥೆ ಪದಾಧಿಕಾರಿಗಳು, ಹಾಗೂ 40 ದಳ ನಾಯಕರುಗಳು ಇದೇ ಸಂದರ್ಭದಲ್ಲಿ ಭಾಗವಹಿಸಿದ್ದರು.

* ಡಿಸೆಂಬರ್ 13 ಸ್ಥಳೀಯ ಸಂಸ್ಥೆ ತಿಪಟೂರು ತಾಲ್ಲೂಕಿನಲ್ಲಿ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜಿನಲ್ಲಿ ನೂತನ ರೋವರ್ ಮತ್ತು ರೇಂಜರ್ಸ್ ಘಟಕವನ್ನು ಉದ್ಘಾಟಿಸಲಾಯಿತು. ಕಾರ್ಯಕ್ರಮದಲ್ಲಿ ಜಿಲ್ಲಾ ಸಹಾಯಕ ಆಯುಕ್ತರಾದ ಶ್ರೀ ಹುಚ್ಚಯ್ಯರವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು, ತಾಲೂಕು ದೈಹಿಕ ಪರಿವೀಕ್ಷಕರು ಶ್ರೀಮತಿ ಶ್ರಮಂತರವರು ಆಗಮಿಸಿದರು ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಶಿವಕುಮಾರ ಅಧ್ಯಕ್ಷತೆ ವಹಿಸಿದ್ದರು, ಜಿಲ್ಲಾ ಸಂಘಟಕರದ ಶ್ರೀ ನವೀನ್ ಕುಮಾರ್, ರೋವರ್ ಸ್ಕೌಟ್ ಲೀಡರ್ ಶ್ರೀ ಪ್ರಶಾಂತ್‌ರವರು ಉಪಸ್ಥಿತರಿದ್ದರು.



* ಡಿಸೆಂಬರ್ 16 ರಿಂದ 17ರ ವರೆಗೆ ಸ್ಥಳೀಯ ಸಂಸ್ಥೆ ತುರುವೇಕೆರೆ ತಾಲೂಕಿನಲ್ಲಿ ದ್ವಿತೀಯ ಸೋಪಾನ ಪರೀಕ್ಷಾ ಶಿಬಿರವನ್ನು ಏರ್ಪಡಿಸಲಾಗಿತ್ತು. ಶಿಬಿರವನ್ನು ತಾಲ್ಲೂಕು ಅಧ್ಯಕ್ಷರಾದ ಶ್ರೀ ಧನಪಾಲ್ ರವರು ಉದ್ಘಾಟಿಸಿದರು ಮುಖ್ಯ ಅತಿಥಿಯಾಗಿ ತಾಲ್ಲೂಕು ದೈಹಿಕ ಪರಿವೀಕ್ಷಕರಾದ ಶ್ರೀ ಮೋಹನ್ ಕುಮಾರ್ ಆಗಮಿಸಿದ್ದರು, ಶಿಬಿರದ ನಾಯಕರಾಗಿ ಜಿಲ್ಲಾ ತರಬೇತುದಾರರಾದ ಶ್ರೀ ಗಂಗಾಧರ್ ಟಿ.ಸಿ., ನಾಯಕತ್ವ ವಹಿಸಿದ್ದರು, ಶಿಬಿರದಲ್ಲಿ ತಾಲ್ಲೂಕು ಕಾರ್ಯದರ್ಶಿ ಶ್ರೀ ಕಮಲ್‌ರಾಜ್, ಜಿಲ್ಲಾ ಸಂಘಟಕಾರದ ಶ್ರೀ ನವೀನ್‌ಕುಮಾರ್, ತಾಲ್ಲೂಕು ಪದಾಧಿಕಾರಿಗಳು ಮತ್ತು ದಳ ನಾಯಕರು ಉಪಸ್ಥಿತರಿದ್ದರು, ಸ್ಕೌಟ್ ವಿಭಾಗದಿಂದ 100 ವಿದ್ಯಾರ್ಥಿಗಳು, ಗೈಡ್ಸ್ ವಿಭಾಗದಿಂದ 85 ವಿದ್ಯಾರ್ಥಿನಿಯರು ಭಾಗವಹಿಸಿದ್ದರು.


pielabz™
Practicality In Education
Kid-tested | expert- designed
Equip your School with Pielabz
Transforming classrooms with curriculum-aligned, grade-specific STEM activity kits
Welcome to the world of STEM
Delivering Raw materials
Assembly in Class
Take Home kits
Delivering STEM Programs in Schools since 2016
90%
Teach Others
75%
Hands on Learning
pielabz
50%
Discussion
30%
Demonstration
20%
Audio Visual
10%
Reading
5%
Lecture
Why Pielabz STEM kits?
Hands on Learning enhances retention and understanding, making PIELABZ STEM kits effective tools for promoting experiential and inquiry-based learning.
"The only source of knowledge is EXPERIENCE"
-AE
Check out the full list of activities
www.pielabz.com
connect@pielabz.com
+91 76192 07779

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಎನ್.ಆರ್.ಚೌಕ, ಬೆಂಗಳೂರು-560 002



# ಬಿಬಿಎಂಪಿ 24/7 ಉಚಿತ ಸಹಾಯವಾಣಿ 1533

(ಮೊದಲಿದ್ದ ಸಂಖ್ಯೆ 1912)

**Press 1** ಕೋವಿಡ್-19 ಸಹಾಯವಾಣಿ

**Press 2** ಬಿಬಿಎಂಪಿ ಕುಂದುಕೊರತೆ

## ಬೆಂಗಳೂರಿನ ನಾಗರಿಕ ಬಂಧುಗಳೆ,

ಸಾರ್ವಜನಿಕ ಕುಂದುಕೊರತೆಗಳ ನಿವಾರಣೆ ಈಗ ದೂರವಾಣಿ ಕರೆಯಷ್ಟು ಸರಳ-ಸುಲಭ. ಕೆಳಗೆ ತಿಳಿಸಲಾದ ವಿಷಯಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ಸಹಾಯ ಅಥವಾ ದೂರುಗಳ ಕ್ಷಿಪ್ರ ಪರಿಹಾರಕ್ಕಾಗಿ ಬಿಬಿಎಂಪಿ 24/7 ಉಚಿತ ಸಹಾಯವಾಣಿ ಸಂಖ್ಯೆ: 1533ಕ್ಕೆ ಕರೆಮಾಡಿ.

- ಕೋವಿಡ್ ಪರೀಕ್ಷೆ
- ಮನೆಯಲ್ಲೆ ಪ್ರತ್ಯೇಕವಾಗಿರುವುದು
- ಕೋವಿಡ್ ಆರೈಕೆ ಕೇಂದ್ರ
- ಆಸ್ಪತ್ರೆ
- ಲಸಿಕೆ
- ಘನತ್ಯಾಜ್ಯ ನಿರ್ವಹಣೆ
- ರಸ್ತೆ ನಿರ್ವಹಣೆ
- ಒಳಚರಂಡಿಗಳು
- ರಸ್ತೆಗುಂಡಿ ದೂರುಗಳು
- ಬೀದಿ ದೀಪಗಳ
- ಕೀಟ ನಿಯಂತ್ರಣ
- ಪಶುಸಂಗೋಪನೆ ಕಲ್ಯಾಣ
- ಅರಣ್ಯ ಮತ್ತು ತೋಟಗಾರಿಕೆ
- ಚಿತಾಗಾರ
- ಆಸ್ತಿ ತೆರಿಗೆ ಸಮಸ್ಯೆಗಳು
- ವ್ಯಾಪಾರ ಪರವಾನಗಿ
- ಜನನ/ಮರಣ/ಖಾತಾ ಪ್ರಮಾಣಪತ್ರಗಳು
- ಕಟ್ಟಡ ನಕ್ಷೆ ಅನುಮೋದನೆ

**ರಾಕೇಶ್ ಸಿಂಗ್,** ಭಾ.ಆ.ಸೇ.
ಆಡಳಿತಗಾರರು, ಬಿಬಿಎಂಪಿ

ಮಾಸ್ಕ್ ಧರಿಸಿ | ಸುರಕ್ಷಿತವಾಗಿರಿ | ಆರೋಗ್ಯದಿಂದಿರಿ

**ತುಷಾರ್ ಗಿರಿ ನಾಥ್,** ಭಾ.ಆ.ಸೇ.
ಮುಖ್ಯ ಆಯುಕ್ತರು, ಬಿಬಿಎಂಪಿ

## *Glimpses of National Level Rovers-Rangers Carnival*
### *from 21st to 25th December held at Belagavi, Karnataka State*
















Regd. as News Paper (Magazine) RNI No: 13348/1959. Postal Regd. No. KA/BGGPO/2580/2021-23
Licensed to Post Without Prepayment License No. PMG/BG/WPP-340/2021-2023.
Date of Publishing 28th of Every Month
Posted at: Bengaluru PSO, Mysore Road, Bengaluru-26 on 28th & 30th of every month (No. of Pages: 32)

SHAHEEN
GROUP OF INSTITUTIONS

# ADMISSIONS OPEN

## COURSES OFFERED

- **PUC (Science)**
  Integrated with NEET/JEE
- **NEET Long Term**
  Repeaters Batch
- **PUC (Arts)**
  Integrated with UPSC/CLAT
- **PUC (Commerce)**
  Integrated with CA Foundation
- **B.A, B.Sc, B.Com BBA & BCA**
  Integrated with UPSC
- **Pre Cum Mains UPSC for Graduates**
  One Year Exclusive UPSC Course
- **MSc (Maths)**

www.shaheengroup.org | Toll Free: 1800 121 6235
Head Office: Shaheen Nagar, BIDAR - 585403.



If not delivered, please return to :
THE EDITOR, Karnataka Scout & Guide
State Headquarters, Shanthi Gruha
#39, Palace Road, Bengaluru - 560 001
Ph.: 080-22260017, 22267470
e-mail.: info@bsgkarnataka.org
shanthigruha@scout.org.in
www.bsgkarnataka.org

Published by: The Bharat Scouts & Guides, Karnataka, State Headquarters
Shanthi Gruha #39, Palace Road, Bengaluru - 560 001. Publisher & Editor: K. Gangappa Gowda
Printed by: L. Lingappa, M.D. Sathyasri Printers Pvt. Ltd., 16/1, 3rd Cross, 2nd Main, Kasturiba Nagar, Mysore Rd, Bengaluru 26